# 2022-23ನೇ ಸಾಲಿನ ಬೆಳೆ ಸಮೀಕ್ಷೆ ಕಾರ್ಯಕ್ರಮದ ಮಾರ್ಗಸೂಚಿಗಳು

## ಬೆಳೆ ಸಮೀಕ್ಷೆ ಕಾರ್ಯಕ್ರಮ-2022-23

### ಪೀಠಿಕೆ:

2017ಕ್ಕಿಂತ ಮುಂಚಿತವಾಗಿ ಬೆಳೆ ವಿಸ್ತೀರ್ಣ ಅಂದಾಜು ಅಂಕಿ ಅಂಶಗಳ ಕ್ರೂಢೀಕರಣ ಕಾರ್ಯವನ್ನು ಕೃಷಿ, ಕಂದಾಯ ಮತ್ತು ಜಲಸಂಪನ್ಮೂಲ ಇಲಾಖೆ ಸಿಬ್ಬಂದಿಯನ್ನೊಳಗೊಂಡ ತಂಡವು ಮಾನ್ಯುಯಲ್ ಆಗಿ ಸಮೀಕ್ಷಾ ಕಾರ್ಯ ನಿರ್ವಹಿಸುತ್ತಿತ್ತು. ಮಾನವ ಆಧಾರಿತ (manual) ಸಮೀಕ್ಷೆಯ ಮೂಲಕ ಕ್ಷೇತ್ರ ಮಟ್ಟದ ಬೆಳೆ ಮಾಹಿತಿಯನ್ನು ಪರಿಣಾಮಕಾರಿಯಾಗಿ ಸಂಗ್ರಹಿಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ, ನಿಖರ ಮಾಹಿತಿ ಪಡೆಯಲು ಕಷ್ಟಸಾಧ್ಯವಾಗಿತ್ತು. ಆದ್ದರಿಂದ, ಸರ್ವೆ/ಹಿಸ್ಸಾ ಸಂಖ್ಯೆ ಮಾಹಿತಿಯನ್ನು ನಿಖರವಾಗಿ ಸಂಗ್ರಹಿಸಲು ಹೊಸ ವ್ಯವಸ್ಥೆಯನ್ನು ಜಾರಿಗೊಳಿಸುವ ಅವಶ್ಯಕತೆ ಒದಗಿ ಬಂದಿರುತ್ತದೆ.

### ಹಿನ್ನೆಲೆ:

ಸರ್ವೆ ನಂಬರ್ / ಹಿಸ್ಸಾ ನಂಬರ್ ವಾರು ಬೆಳೆ ಮಾಹಿತಿ ಸಂಗ್ರಹಣೆ ಸಮಸ್ಯೆಗಳ ನಿವಾರಿಸಲು, 2017 ರ ಮುಂಗಾರು ಹಂಗಾಮಿನಲ್ಲಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಆಡಳಿತ)ಯು ಅಭಿವೃದ್ಧಿಪಡಿಸಿದ್ದ ಮೊಬೈಲ್ ತಂತ್ರಾಂಶವನ್ನು ಬಳಸಿಕೊಂಡು ಕೃಷಿ ಮತ್ತು ಕೃಷಿ ಸಂಬಂಧಿತ ಇಲಾಖೆಗಳು ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳಿಂದ ಬೆಳೆ ಸಮೀಕ್ಷೆ ಕಾರ್ಯಕ್ಕೆ ಪ್ರಯತ್ನಿಸಿ ಒಟ್ಟು 2.10 ಕೋಟಿ ಜಮೀನುಗಳ ಪೈಕಿ (ಸರ್ವೆ ನಂಬರ್ ಮತ್ತು ಅವುಗಳ ಹಿಸ್ಸಾ ಒಳಗೊಂಡಂತೆ), 1.51 ಕೋಟಿ ಜಮೀನುಗಳ ಸಮೀಕ್ಷೆ ಕೈಗೊಂಡು ಬೆಳೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಮುಂಗಾರು 2018 ರಲ್ಲಿ ಬೆಳೆ ಸಮೀಕ್ಷೆಯನ್ನು ಮುಂದುವರೆಸಿ ಆಯಾ ಗ್ರಾಮದ ಖಾಸಗಿ ನಿವಾಸಿಗಳಲ್ಲಿ ತಂತ್ರಾಂಶದ ಜ್ಞಾನವುಳ್ಳ ಯುವಕರು (ಪಿ.ಆರ್-ಪ್ರೈವೇಟ್ ರೆಸಿಡೆಂಟ್ಸ್) ಮತ್ತು ಕೆಲವು ಸರಕಾರಿ ಸಿಬ್ಬಂದಿಗಳ ಸೇವೆಯನ್ನು ಬಳಸಿಕೊಂಡು ಆರಂಭಿಸಲಾಯಿತು. ಖಾಸಗಿ ನಿವಾಸಿಗಳಿಗೆ ಗರಿಷ್ಠ 1500 ತಾಕುಗಳನ್ನು ಸಮೀಕ್ಷೆ ಮಾಡಲು ಅವಕಾಶವನ್ನು ನೀಡಿ ಸಮೀಕ್ಷೆ ಮಾಡಿದ ಪ್ರತಿ ತಾಕಿನ ಮೊದಲ ಬೆಳೆಗೆ ರೂ.10/- ರಂತೆ ಹಾಗೂ ತಾಕಿನಲ್ಲಿ ಇರುವ ಪ್ರತಿ ಹೆಚ್ಚುವರಿ ಬೆಳೆಗೆ ರೂ.2 ರಂತೆ ಗರಿಷ್ಠ ರೂ.15/- ರಂತೆ ಪಾವತಿಸಲಾಯಿತು ಹಾಗೂ ಸರ್ಕಾರಿ ಸಿಬ್ಬಂದಿಗೂ ಸಹ ಒಂದು ದಿನದಲ್ಲಿ 50 ಕ್ಕೂ ಹೆಚ್ಚು ಪ್ಲಾಟ್ ಗಳನ್ನು ಸಮೀಕ್ಷೆ ಮಾಡಿದ ಸಂದರ್ಭದಲ್ಲಿ ಪ್ರತಿ ಪ್ಲಾಟ್ ಸಮೀಕ್ಷೆಗೆ ರೂ.10/-ರಂತೆ ಪಾವತಿಸಿ ಸಮೀಕ್ಷೆಯನ್ನು ಪೂರ್ಣಗೊಳಿಸಲಾಯಿತು.

2019 ರಲ್ಲಿ ಪೂರ್ವ ಮುಂಗಾರು, ಮುಂಗಾರು ಹಂಗಾಮಿನ ಮೂರು ಹಂತಗಳಲ್ಲಿ, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಖಾಸಗಿ ನಿವಾಸಿಗಳಿಂದ ಬೆಳೆ ಸಮೀಕ್ಷೆ ಕೈಗೊಂಡಿದ್ದು, ಒಟ್ಟು 3.56 ಕೋಟಿ ತಾಕುಗಳ ಸಮೀಕ್ಷೆಯನ್ನು ಮಾಡಿ 2018ರಂತೆ ಗೌರವಧನವನ್ನು ಪಾವತಿಸಲಾಗಿರುತ್ತದೆ ಹಾಗೂ ಸದರಿ ವರ್ಷದಲ್ಲಿ ಕೃಷಿ ಇಲಾಖೆಯನ್ನು ಬೆಳೆ ಸಮೀಕ್ಷೆಯ ಉಸ್ತುವಾರಿಯನ್ನು ವಹಿಸಲು ನೋಡಲ್ ಇಲಾಖೆಯಾಗಿ ಆದೇಶಿಸಿ ಇತರೆ ಇಲಾಖೆಗಳು ಕೃಷಿ ಇಲಾಖೆಯ ಮಾರ್ಗದರ್ಶನ ಹಾಗೂ ಸಮನ್ವಯದೊಂದಿಗೆ ಸಮೀಕ್ಷೆ ಕಾರ್ಯವನ್ನು ನಡೆಸಲಾಯಿತು ಹಾಗೂ ಸಮೀಕ್ಷೆಯಡಿ ದಾಖಲಾದ ದತ್ತಾಂಶವನ್ನು ಪರಿಶೀಲಿಸಲು ತಾಲ್ಲೂಕು ಮಟ್ಟದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಗುಣಮಟ್ಟ ಖಾತರಿ ಅಧಿಕಾರಿಗಳೆಂದು ಮತ್ತು ಜಿಲ್ಲಾ, ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಬೆಳೆ ಸಮೀಕ್ಷೆಯ ಉಸ್ತುವಾರಿಯನ್ನು ಮಾಡಲು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಿರುವುದು ವಿಶೇಷವಾಗಿದ್ದು, ಉಳಿದಂತೆ ಎಲ್ಲಾ ಚಟುವಟಿಕೆಗಳು 2018ರಂತೆ ಮುಂದುವರೆದಿರುತ್ತದೆ.

2020-21ನೇ ಸಾಲಿನಲ್ಲಿ ರೈತರೇ ತಮ್ಮ ಜಮೀನುಗಳಲ್ಲಿ ಬೆಳೆದ ಬೆಳೆಗಳ ಛಾಯಾಚಿತ್ರಗಳನ್ನು ತಾವೇ ಸ್ವತಃ ಅಥವಾ ಸ್ಥಳೀಯ ಖಾಸಗಿ ನಿವಾಸಿಗಳ

ಸಹಾಯದೊಂದಿಗೆ ಅಪ್ ಲೋಡ್ ಮಾಡಲು ಅವಕಾಶ ಒದಗಿಸಲಾಗಿದೆ. ಈ ಮೂಲಕ ಬೆಳೆ ಸಮೀಕ್ಷೆಯಡಿ ದಾಖಲಾಗುವ ವಿವರಗಳ ಬಗ್ಗೆ ರೈತರಿಗೆ ನಂಬಿಕೆ ಬರುವುದರ ಜೊತೆಗೆ ತಾವು ಬೆಳೆದ ಬೆಳೆಗಳ ನಿಖರ ಮಾಹಿತಿಯನ್ನು ದಾಖಲಿಸುವ ಮೂಲಕ ಸರ್ಕಾರದಿಂದ ಬರುವ ಎಲ್ಲಾ ಸವಲತ್ತುಗಳನ್ನು ಯಾವುದೇ ಅಡೆತಡೆಗಳಿಲ್ಲದೆ ಪಡೆದು ಸ್ವಾಭಿಮಾನಿಗಳನ್ನಾಗಿಸುವ ಉದ್ದೇಶದಿಂದ ಸಿಆಸುಇ(ಇ-ಆಡಳಿತ) ರವರು ವಿಶೇಷವಾಗಿ ಅಭಿವೃದ್ಧಿಪಡಿಸಿರುವ ರೈತರ ಮೊಬೈಲ್ ಆಪ್ ಅನ್ನು ಬಳಸಲಾಯಿತು. ಇದರ ಜೊತೆಯಲ್ಲಿ ಖಾಸಗಿ ನಿವಾಸಿಗಳ ಆಪ್ ಸಹ ಬಳಸಿಕೊಂಡು ಮುಂಗಾರು (2.1 ಕೋಟಿ ತಾಕುಗಳ ಗುರಿಗೆ ಶೇ.100ರಷ್ಟು ಪ್ರಗತಿಯನ್ನು ಸಾಧಿಸಿದೆ) ಮತ್ತು ಹಿಂಗಾರು ಹಂಗಾಮಿನ (1.12 ಕೋಟಿ ತಾಕುಗಳ ಗುರಿಗೆ ಶೇ.98.29ರಷ್ಟು ಪ್ರಗತಿಯನ್ನು ಸಾಧಿಸಿದೆ) ಬೆಳೆ ಸಮೀಕ್ಷೆಯನ್ನು ಪೂರ್ಣಗೊಳಿಸಲಾಗಿರುತ್ತದೆ. ಬೇಸಿಗೆ ಹಂಗಾಮಿನ ಬೆಳೆ ಸಮೀಕ್ಷೆಯು ಪ್ರಗತಿಯಲ್ಲಿದ್ದು, ಪ್ರಸ್ತುತ ದಿನದವರೆಗೆ ಸುಮಾರು ಒಟ್ಟು 0.082 ಕೋಟಿ ತಾಕುಗಳ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ. ಪ್ರಸ್ತುತ ಸಾಲಿನಲ್ಲಿ ಪ್ರತಿ ತಾಕಿಗೆ ರೂ.10/- ರಂತೆ ಹಾಗೂ ಹೆಚ್ಚುವರಿ ಸಮೀಕ್ಷೆಯ ಪ್ರತಿ ತಾಕಿಗೆ ರೂ.5/- ರಂತೆ ಗರಿಷ್ಠ ರೂ.20/- ಗಳನ್ನು ಪಾವತಿಸಲಾಗಿದೆ.

2020-21ರ ವಿಶೇಷತೆ ಎಂದರೆ ರೈತರ ಮೊಬೈಲ್ ಆಪ್ ಬಿಡುಗಡೆ, ಸ್ವಾತಂತ್ರ ದಿನಾಚರಣೆ ಪ್ರಯುಕ್ತ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಬೆಳೆ ಸಮೀಕ್ಷೆ ವಿಷಯವನ್ನು ಜನಪ್ರತಿನಿಧಿಗಳ ಮುಖ್ಯ ಭಾಷಣದಲ್ಲಿ ಸೇರಿಸಿ ಪ್ರಸ್ತಾಪಿಸಿರುವುದು ಹಾಗೂ ಬೆಳೆ ಸಮೀಕ್ಷೆ ಮತ್ತು ಅದರ ಪ್ರಾಮುಖ್ಯತೆಯನ್ನು ಸಾರುವ ಸಲುವಾಗಿ ಬೆಳೆ ಸಮೀಕ್ಷೆ ಉತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡು ವ್ಯಾಪಕ ಪ್ರಚಾರ ನೀಡಿ ಕಾಲಮಿತಿಯಲ್ಲಿ ಸಮೀಕ್ಷೆಯನ್ನು ಪೂರ್ಣಗೊಳಿಸಿರುವುದು ಮತ್ತು ರೈತರಿಂದ ಕಡಿಮೆ ಸಂಖ್ಯೆಯಲ್ಲಿ ಆಕ್ಷೇಪಣೆಗಳು ಸ್ವೀಕೃತವಾಗಿರುವುದು.

ಮುಂದುವರೆದು, 2021-22ನೇ ಸಾಲಿನಲ್ಲಿ ಪೂರ್ವ ಮುಂಗಾರು, ಮುಂಗಾರು, ಹಿಂಗಾರು ಹಾಗೂ ಬೇಸಿಗೆ ಹಂಗಾಮುಗಳು (18.04.2022 ರವರೆಗೆ) ಸೇರಿದಂತೆ ರೈತರ ಮೊಬೈಲ್ ಆಪ್ ಮೂಲಕ 17.48 ಲಕ್ಷ ತಾಕುಗಳು ಹಾಗೂ ಖಾಸಗಿ ನಿವಾಸಿಗಳ ಆಪ್ ಮೂಲಕ 381.82 ಲಕ್ಷ ತಾಕುಗಳಂತೆ ಒಟ್ಟಾರೆಯಾಗಿ 399.31 ಲಕ್ಷ ತಾಕುಗಳ ಸಮೀಕ್ಷೆಯನ್ನು ಕೈಗೊಂಡು 2020-21ರಂತೆ ಗೌರವಧನವನ್ನು ಪಾವತಿಸಲಾಗಿರುತ್ತದೆ.

**ಉದ್ದೇಶಗಳು:**

1. ಮೊಬೈಲ್ ಅಪ್ಲಿಕೇಶನ್ ಅನ್ನು ಬಳಸಿ ಸಮೀಕ್ಷೆ ಮಾಡುವುದರ ಮೂಲಕ ಬೆಳೆ ಪ್ರದೇಶದ ನಿಖರ ಅಂಕಿಅಂಶಗಳ ಕ್ರೂಢೀಕರಣ
2. ಆಯಾ ಋತುಮಾನಕ್ಕನುಗುಣವಾಗಿ ಪಹಣಿಗಳಲ್ಲಿ ಸರಿಯಾದ ಬೆಳೆ ಮಾಹಿತಿಯ ದಾಖಲೆ
3. ಬೆಳೆ ಸಮೀಕ್ಷೆ ಚಟುವಟಿಕೆಗಳಿಂದ ಸೆರೆಹಿಡಿಯಲಾದ ದತ್ತಾಂಶವನ್ನು ಸರ್ಕಾರದ ವಿವಿಧ ಯೋಜನೆಗಳಲ್ಲಿ ಕನಿಷ್ಠ ಬೆಲೆ ಬೆಂಬಲ, ಸಬ್ಸಿಡಿ ಪಾವತಿ, ಬೆಳೆ ಪ್ರದೇಶದ ಅಂದಾಜು, ಕೃಷಿ ಮತ್ತು ತೋಟಗಾರಿಕೆ ಯೋಜನೆಗಳ ಅಡಿಯಲ್ಲಿ ಫಲಾನುಭವಿಗಳ ಆಯ್ಕೆ ಮುಂತಾದವುಗಳಿಗೆ ಬಳಸುವುದು.
4. ಸ್ಥಳೀಯ ಯುವಕರ ಸೇವೆಯನ್ನು ಬಳಸಿಕೊಳ್ಳುವುದರ ಮೂಲಕ ತಾತ್ಕಾಲಿಕ ಉದ್ಯೋಗದ ಸೃಷ್ಟಿ.
5. ವಿವಿಧ ತರಹದ ಜಮೀನುಗಳ ವಿವರಗಳ ಲಭ್ಯತೆ (ಕೃಷಿಯೇತರ, ಪಾಳು ಇತರೆ..)

**ಉಪಯೋಗಗಳು:**

1. ಇನ್ ಪುಟ್ ಸಬ್ಸಿಡಿ ಸ್ಕೀಮ್ (NDRF/SDRF)ನಲ್ಲಿ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಲು.
2. ತೊಗರಿ ಮತ್ತು ಇತರೆ ಬೆಳೆಗಳಿಗೆ ಕೊಡುವ "ಕನಿಷ್ಠ ಬೆಂಬಲ ಬೆಲೆ ಯೋಜನೆ" ಯಲ್ಲಿ ಫಲಾನುಭವಿಗಳನ್ನು ಗುರುತಿಸಲು, 'ಈರುಳ್ಳಿ ಬೆಲೆ ಕೊರತೆ ಪಾವತಿ

ಯೋಜನೆ' ಹಾಗೂ 'ಒಣಗಿದ ಅಥವಾ ಅನುತ್ಪಾದಕ ತೆಂಗಿಗೆ ಸಹಾಯ ಧನ" ನೀಡಲು.

3. ಬೆಳೆ ವಿಮೆ ಯೋಜನೆಯಲ್ಲಿ ರೈತರಿಂದ ವಿಮೆ ಮಾಡಲ್ಪಟ್ಟ ತಾಕುಗಳಲ್ಲಿ ಬೆಳೆದ ಬೆಳೆ ತಾಕುಗಳ ಪರಿಶೀಲನೆ ಮಾಡಲು ಬಳಸಿಕೊಳ್ಳಲಾಯಿತು.
4. ಕೋವಿಡ್ ಸಂಕಷ್ಟ ಸಮಯದಲ್ಲಿ ಮುಸುಕಿನ ಜೋಳ, ಹಣ್ಣು, ತರಕಾರಿ ಮತ್ತು ಹೂವು ಬೆಳೆದ ಪ್ರತಿ ರೈತರಿಗೆ ಕ್ರಮವಾಗಿ ತಲಾ ರೂ.5000/-, 15000/- ಮತ್ತು 25000/- ರೂ.ಗಳಂತೆ ಕೋವಿಡ್ ಸಂಕಷ್ಟ ಪರಿಹಾರವನ್ನು ನೇರವಾಗಿ ರೈತರ ಖಾತೆಗೆ ನೀಡಲಾಯಿತು.
5. ಬ್ಯಾಂಕುಗಳಲ್ಲಿ ರೈತರಿಗೆ ಬೆಳೆ ಸಾಲವನ್ನು ಬೆಳೆ ಸಮೀಕ್ಷೆ ಆಧಾರಿತ ದತ್ತಾಂಶವನ್ನು ಪರಿಗಣಿಸಿ ಮಂಜೂರಾತಿ ನೀಡಲು ತೀರ್ಮಾನಿಸಿ ಅದರಂತೆ ಕ್ರಮ ಕೈಗೊಳ್ಳಲಾಯಿತು.

## ಬೆಳೆ ಸಮೀಕ್ಷೆ ಕಾರ್ಯಕ್ರಮದಡಿ ಬರುವ ಚಟುವಟಿಕೆಗಳು:

### ಗ್ರಾಮಗಳ ಆಯ್ಕೆ

ರಾಜ್ಯದಲ್ಲಿ ಸುಮಾರು 30000 ಗ್ರಾಮಗಳು ಇದ್ದು, ಸದರಿ ಗ್ರಾಮಗಳಲ್ಲಿ ಬೆಳೆ ಸಮೀಕ್ಷೆಯನ್ನು ಕೈಗೊಳ್ಳುವುದು ಅವಶ್ಯವಿರುತ್ತದೆ. ಆದರೆ, ಪ್ರತಿ ಹಂಗಾಮಿಗೆ ಅನುಗುಣವಾಗಿ ಗ್ರಾಮಗಳ ಆಯ್ಕೆಯು ಬದಲಾಗುತ್ತಿದೆ.

ಮುಂಗಾರು - ಎಲ್ಲಾ ಗ್ರಾಮಗಳಲ್ಲಿ ಸಮೀಕ್ಷೆ ಅವಶ್ಯವಿರುತ್ತದೆ.

ಹಿಂಗಾರು ಮತ್ತು ಬೇಸಿಗೆ – ಬೆಳೆ ಸಮೀಕ್ಷೆ ಮಾಸ್ಟರ್ ಗಳಲ್ಲಿ ನಮೂದಿಸುವ ವಿವರಗಳಿಗೆ ಹಾಗೂ ಸದರಿ ಹಂಗಾಮಿನ ಬೆಳೆ ಸಮೀಕ್ಷೆಯ ಮಾನದಂಡಗಳಿಗೆ (ಬೆಳೆ ವಿಮೆಗೆ ಅಧಿಸೂಚನೆಗೊಂಡಿರುವ ಗ್ರಾಮಗಳು, 5 ಹೆಕ್ಟೇರ್ ಗಿಂತ ಕಡಿಮೆ ಬಿತ್ತನೆ ಪ್ರದೇಶದ ಗ್ರಾಮಗಳು, ಜಿಲ್ಲಾಧಿಕಾರಿಗಳ ಸೂಕ್ತ ಪ್ರಸ್ತಾವನೆಗಳೊಂದಿಗೆ ಮುಳುಗಡೆಯಾದ ಗ್ರಾಮಗಳು ಮತ್ತು ಬೆಳೆ ವಿಮೆಗೆ ಅಧಿಸೂಚನೆಗೊಂಡು ಶೂನ್ಯ ಬಿತ್ತನೆಯಾದ ಗ್ರಾಮಗಳು ಹೊರತುಪಡಿಸಿ) ಅನುಗುಣವಾಗಿ ಹಳ್ಳಿಗಳನ್ನು ಆಯ್ಕೆ ಮಾಡಬೇಕಾಗುತ್ತದೆ.

ಕಂದಾಯ ಇಲಾಖೆಯ ಅಧಿಸೂಚನೆ ಸಂಖ್ಯೆ: ಆರ್ ಡಿ 23 ಇಎಲ್ ಆರ್ 2004 ದಿ: 06.06.2005 ರನ್ವಯ MIS ವರದಿಗಳನ್ನು ರಚಿಸಲಾಗುವುದು ಮತ್ತು ಸದರಿ ಅಧಿಸೂಚನೆಯನ್ವಯ ಅಸ್ತಿತ್ವಕ್ಕೆ ತರಲಾಗಿರುವ ಸಮಿತಿಯು ವಾರಕ್ಕೊಮ್ಮೆ ದತ್ತಾಂಶ ಸಂಗ್ರಹಣೆಯನ್ನು ವಾರಕ್ಕೊಮ್ಮೆ ದತ್ತಾಂಶ ಸಂಗ್ರಹಣೆಯನ್ನು ಪರಿಶೀಲಿಸಿ, ಅಂತಿಮವಾಗಿ ದತ್ತಾಂಶವನ್ನು ಅನುಮೋದಿಸುವುದು.

### ಮಾಸ್ಟರ್ ಎಂಟ್ರಿ

ಮುಂಗಾರು ಹಂಗಾಮು ಹೊರತುಪಡಿಸಿ, ಬೆಳೆ ವಿಮೆಗೆ ಅಧಿಸೂಚನೆಗೊಂಡಿರುವ ಗ್ರಾಮಗಳು, 5 ಹೆಕ್ಟೇರ್ ಗಿಂತ ಕಡಿಮೆ ಬಿತ್ತನೆ ಪ್ರದೇಶದ ಗ್ರಾಮಗಳು, ಜಿಲ್ಲಾಧಿಕಾರಿಗಳ ಸೂಕ್ತ ಪ್ರಸ್ತಾವನೆಗಳೊಂದಿಗೆ ಸಲ್ಲಿಕೆಯಾಗುವ ಮುಳುಗಡೆಯಾದ ಗ್ರಾಮಗಳು ಮತ್ತು ಬೆಳೆ ವಿಮೆಗೆ ಅಧಿಸೂಚನೆಗೊಂಡು ಶೂನ್ಯ ಬಿತ್ತನೆಯಾದ ಗ್ರಾಮಗಳು ಹೊರತುಪಡಿಸುವ ಜೊತೆಗೆ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಬೆಳೆ ಸಮೀಕ್ಷೆಯನ್ನು ಈ ಕೆಳಕಂಡ ಮಾಸ್ಟರ್ ವಿವರಗಳನ್ನು ಬಳಸಿಕೊಂಡು ರಾಜ್ಯದ 210 ಲಕ್ಷ ತಾಕುಗಳಲ್ಲೂ ಕೈಗೊಳ್ಳದೆ ಗ್ರಾಮವಾರು ತಾಕುಗಳನ್ನೂ ಸಹ ಸಮೀಕ್ಷೆಯಿಂದ ಕೈಬಿಟ್ಟು ಉಳಿದ ತಾಕುಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿರುತ್ತದೆ.

1. Village wise Marking Of Perennial Crops where Annual Intercrop is Possible in Rabi / Summer
2. Long duration Kharif / Rabi crops after which Rabi / Summer crop cannot be sown on the same plot"
3. Crops which are sown only in Rabi / Summer not in Kharif / Rabi

4. Harvest Over Crop Details
5. Long duration Kharif / Rabi crops after which Rabi / Summer crop cannot be sown on the same plot.

ಮೇಲೆ ತಿಳಿಸಿರುವ "Crop Masters Entry" ಗಳನ್ನು ನಿಖರವಾದ ಎಲ್ಲಾ ವಿವರಗಳೊಂದಿಗೆ ನಿಗದಿಪಡಿಸಿದ ದಿನಾಂಕದೊಳಗೆ ಪೂರ್ಣಗೊಳಿಸುವುದು, ಹೆಚ್ಚಿನ ಮಾಹಿತಿಗಾಗಿ ಬೆಳೆ ಸಮೀಕ್ಷೆ ಸಹಾಯವಾಣಿ: 8448447715 ಅನ್ನು ಅಥವಾ ಸಂಬಂಧಪಟ್ಟ ಬೆಳೆ ಸಮೀಕ್ಷೆ ಕಾರ್ಯ ತಂಡದ ಜಿಲ್ಲಾ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸುವುದು.

**ಖಾಸಗಿ ನಿವಾಸಿಗಳು**

ಬೆಳೆ ಮಾಹಿತಿ ಸಂಗ್ರಹಣೆಯ ಜವಾಬ್ದಾರಿಯು ಜಿಲ್ಲಾಧಿಕಾರಿಗಳ ಅಧೀನದಲ್ಲಿರುವ ಜಿಲ್ಲಾಡಳಿತದ್ದಾಗಿರುತ್ತದೆ. ಜಿಲ್ಲಾಡಳಿತವು ಕ್ಷೇತ್ರ ಸಿಬ್ಬಂದಿಗಳಿಗೆ (ಕೃಷಿ ಅಧಿಕಾರಿ, ಕಂದಾಯ ನಿರೀಕ್ಷಕರು, ಸಹಾಯಕ ಕೃಷಿ ಅಧಿಕಾರಿ, ಗ್ರಾಮ ಲೆಕ್ಕಿಗರು, ತೋಟಗಾರಿಕೆ ಮತ್ತು ರೇಷ್ಮೆ ಅಧಿಕಾರಿಗಳು) ಖಾಸಗಿ ನಿವಾಸಿಗಳ ಆಯ್ಕೆ, ಗ್ರಾಮಗಳನ್ನು ಹಂಚಿಕೆ ಮಾಡುವುದು ಹಾಗೂ ಆಯಾ ಗ್ರಾಮದ ಖಾಸಗಿ ನಿವಾಸಿಗಳ ಮೂಲಕ ಮಾಹಿತಿಯ ಸಂಗ್ರಹಣೆ ಜವಾಬ್ದಾರಿಯನ್ನು ವಹಿಸಿದೆ.

ಸದರಿ ಅಧಿಕಾರಿಗಳು ಒಬ್ಬರು ಅಥವಾ ಹೆಚ್ಚಿನ ಖಾಸಗಿ ನಿವಾಸಿಗಳನ್ನು ದತ್ತಾಂಶ ಸಂಗ್ರಹಣೆಗಾಗಿ ಪ್ರತಿ ಗ್ರಾಮದಲ್ಲೂ ಗುರುತಿಸಬಹುದಾಗಿದೆ. ಜಿಲ್ಲಾಡಳಿತವು ಗ್ರಾಮ ಮಟ್ಟದಲ್ಲಿ ಸ್ಥಳೀಯವಾಗಿ ಲಭ್ಯವಿರುವ ತಂತ್ರಾಂಶದ ಜ್ಞಾನವುಳ್ಳ ಖಾಸಗಿ ನಿವಾಸಿಗಳನ್ನು ನೇರವಾಗಿ ಗುರುತಿಸಬಹುದಾಗಿದೆ. ಖಾಸಗಿ ನಿವಾಸಿಗಳ ಜೊತೆಗೆ ಅವಶ್ಯವಿದ್ದಲ್ಲಿ, ಗ್ರಾಮ ಸಹಾಯಕರು ಹಾಗೂ ಅಗ್ರಿ ಟೆಕ್ನೋ ಪ್ರಮೋಟರ್ಸ್‌ಗಳ ಸೇವೆಯನ್ನು ಸಹ ದತ್ತಾಂಶ ಸಂಗ್ರಹಣೆಗಾಗಿ ಬಳಸಿಕೊಳ್ಳಬಹುದಾಗಿರುತ್ತದೆ. ಒಬ್ಬ ಸರ್ಕಾರಿ ಸಿಬ್ಬಂದಿಯ ಅಧೀನದಲ್ಲಿ ಪ್ರತಿ ಗ್ರಾಮಕ್ಕೆ ಒಂದು ಅಥವಾ ಹೆಚ್ಚಿನ ಖಾಸಗಿ ನಿವಾಸಿಗಳನ್ನು ಬೆಳೆ ಸಮೀಕ್ಷೆ ಚಟುವಟಿಕೆಗಾಗಿ ನಿಯೋಜಿಸಲಾಗುವುದು.

ಖಾಸಗಿ ನಿವಾಸಿಗಳು ಸರ್ಕಾರಿ ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸುವುದು ಹಾಗೂ ಸರ್ಕಾರವು ನಿಗಧಿಪಡಿಸಿರುವ ಅವಧಿಯಲ್ಲಿಯೇ ಬೆಳೆ ಸಮೀಕ್ಷೆ ತಂತ್ರಾಂಶವನ್ನು ಬಳಸಿ ಬೆಳೆ ಮಾಹಿತಿ ಸಂಗ್ರಹಿಸುವ ಕಾರ್ಯವನ್ನು ಖಚಿತಪಡಿಸಿಕೊಳ್ಳುವ ಜವಾಬ್ದಾರಿ ಜಿಲ್ಲಾಡಳಿತದ್ದಾಗಿರುತ್ತದೆ. ತಂತ್ರಾಂಶದ ತರಬೇತಿಗಾಗಿ ನುರಿತ ತರಬೇತುದಾರರನ್ನು (Master trainer) ಆಯ್ಕೆ ಮಾಡಿ ಅವರುಗಳಿಗೆ ಮೊಬೈಲ್ ಆಪ್ ಬಳಕೆ, ಬೆಳೆಗಳು ಮತ್ತು ಅವುಗಳಿಗೆ ನಿರ್ಧಿಷ್ಟಪಡಿಸಿರುವ ಕೋಡ್ ಗಳ ಬಗ್ಗೆ ಹಾಗೂ ಕ್ಷೇತ್ರ ಮಟ್ಟದಲ್ಲಿ ಕಡ್ಡಾಯವಾಗಿ ಮಾಡಬೇಕಾದ ಮತ್ತು ಮಾಡಬಾರದ ಚಟುವಟಿಕೆಗಳ ಕುರಿತು ಇ-ಆಡಳಿತ ದಿಂದ ತರಬೇತಿ ನೀಡಲಾಗುವುದು. ಇವರುಗಳು ನಂತರ ಖಾಸಗಿ ನಿವಾಸಿಗಳಿಗೆ ತರಬೇತಿಯನ್ನು ಗುರತಿಸಲಾಗಿರುವ ಎಲ್ಲಾ ಖಾಸಗಿ ನಿವಾಸಿಗಳಿಗೆ ಇ-ಆಡಳಿತವು ಒಂದು ಬಾರಿಯ ತರಬೇತಿಯನ್ನು SATCOM ಮೂಲಕ ಜಿಲ್ಲಾಡಳಿತದ ಸಮನ್ವಯದೊಂದಿಗೆ ನೀಡಲಾಗುವುದು.

ಪ್ರತಿ ಖಾಸಗಿ ನಿವಾಸಿಗೆ ಕನಿಷ್ಠ ಒಂದು ಗ್ರಾಮ ಅಥವಾ 800 ತಾಕುಗಳು ಮತ್ತು ಗರಿಷ್ಠ 1500 ತಾಕುಗಳನ್ನು ನಿಯೋಜಿಸಲು ಅವಕಾಶವಿದ್ದು, (ಜಿಲ್ಲವಾರು ಗುರಿಗಳ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ) ಸಮೀಕ್ಷೆ ಮಾಡಿದ ನೈಜ ತಾಕುಗಳಿಗೆ ಪ್ರತಿ ತಾಕಿನ ಮೊದಲ ಬೆಳೆ ರೂ.10/- ರಂತೆ ಹಾಗೂ ನಂತರ ದಾಖಲಿಸುವ ಪ್ರತಿ ಹೆಚ್ಚುವರಿ ಬೆಳೆಗೆ ರೂ.5/- ರಂತೆ ಗರಿಷ್ಠ ರೂ.20 /- ಗಳನ್ನು ಪಾವತಿಸುವುದು.

**ಮೇಲ್ವಿಚಾರಕರು**

ಹೋಬಳಿ / ಗ್ರಾಮ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕ್ಷೇತ್ರ ಸಿಬ್ಬಂದಿಗಳಾದ ಕೃಷಿ ಅಧಿಕಾರಿ, ಕಂದಾಯ ನಿರೀಕ್ಷಕರು, ಸಹಾಯಕ ಕೃಷಿ ಅಧಿಕಾರಿ, ಗ್ರಾಮ ಲೆಕ್ಕಿಗರು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳ ಅಧಿಕಾರಿಗಳು ಖಾಸಗಿ ನಿವಾಸಿಗಳ ಮೂಲಕ ಆಯಾ ಗ್ರಾಮದಲ್ಲಿ ಕೈಗೊಂಡ ಬೆಳೆ ಸಮೀಕ್ಷೆ / ಮರುಸಮೀಕ್ಷೆಯ ತಾಕುವಾರು ದತ್ತಾಂಶವನ್ನು ಪರಿಶೀಲಿಸಿ ಅನುಮೋದಿಸುವ / ತಿರಸ್ಕರಿಸುವ ಅಥವಾ ಬೆಳೆ ದರ್ಶಕ್ /

ವೆಬ್ ಆಪ್ ಮೂಲಕ ರೈತರು ಸಲ್ಲಿಸುವ ಆಕ್ಷೇಪಣೆಗಳನ್ನು ಮಹಜರ್ ಮೂಲಕ ಸರಿಪಡಿಸುವ ಜವಾಬ್ದಾರಿಯು ಮೇಲ್ವಿಚಾರಕರದ್ದಾಗಿರುತ್ತದೆ. ಒಂದು ವೇಳೆ ತಪ್ಪಾಗಿ ಅನುಮೋದಿಸಿ/ತಿರಸ್ಕರಿಸುವುದರಿಂದ ಉಂಟಾಗುವ ಆಗುಹೋಗುಗಳಿಗೆ ಮೇಲ್ವಿಚಾರಕರೇ ಹೊಣೆಗಾರರಾಗಿರುತ್ತಾರೆ.

**ಮಾಸ್ಟರ್ ತರಬೇತುದಾರರು**

ಮೇಲ್ವಿಚಾರಕರಾಗಿ ಕಾರ್ಯ ನಿರ್ವಹಿಸುತ್ತಿರುವ, ವಿವಿಧ ಇಲಾಖೆಗಳ ಅಧಿಕಾರಿಗಳ ಪೈಕಿ ತಂತ್ರಾಂಶದ ಬಗ್ಗೆ ಹೆಚ್ಚಿನ ಜ್ಞಾನವುಳ್ಳವರನ್ನು ಬೆಳೆ ಸಮೀಕ್ಷೆಯ ಆಪ್ ಬಗ್ಗೆ ತರಬೇತಿಗಾಗಿ ನುರಿತ ತರಬೇತುದಾರನ್ನಾಗಿ (Master trainer) ಪ್ರತಿ ತಾಲ್ಲೂಕಿಗೆ 4 ರಂತೆ ಆಯ್ಕೆ ಮಾಡಿ ಅವರುಗಳಿಗೆ ಮೊಬೈಲ್ ಆಪ್ ಬಳಕೆ, ಬೆಳೆಗಳು ಮತ್ತು ಅವುಗಳಿಗೆ ನಿರ್ಧಿಷ್ಟಪಡಿಸಿರುವ ಕೋಡ್ ಗಳ ಬಗ್ಗೆ ಹಾಗೂ ಕ್ಷೇತ್ರ ಮಟ್ಟದಲ್ಲಿ ಬೆಳೆ ಸಮೀಕ್ಷೆ ಆಪ್ ಬಳಸುವಾಗ ಉದ್ಭವಿಸುವ ತಾಂತ್ರಿಕ ದೋಷಗಳು ಮತ್ತು ಅಡೆತಡೆಗಳನ್ನು ನಿವಾರಿಸುವ ಜವಾಬ್ದಾರಿ ಇರುತ್ತದೆ.

ರಾಜ್ಯ ಮಟ್ಟದಲ್ಲಿ ಬೆಳೆ ಸಮೀಕ್ಷೆ ಸಲುವಾಗಿ ಆಯೋಜಿಸುವ ಎಲ್ಲಾ ತಾಂತ್ರಿಕ ಸಭೆ / ವಿಡಿಯೊ ಸಂವಾದ ಕಾರ್ಯಕ್ರಮಗಳಲ್ಲಿ ಹಾಜರಾಗುವ ಜೊತೆಗೆ ಖಾಸಗಿ ನಿವಾಸಿಗಳಿಗೆ ಗ್ರಾಮ, ಹೋಬಳಿ ಹಾಗೂ ತಾಲ್ಲೂಕು ಮಟ್ಟದಲ್ಲಿ ತರಬೇತಿಯನ್ನು ಆಯೋಜಿಸಬೇಕಾಗಿರುತ್ತದೆ. ಈ ರೀತಿ ಆಯೋಜಿಸುವ ಪ್ರತಿ ತರಬೇತಿಗೆ ರೂ.500 ರಂತೆ ವರ್ಷಕ್ಕೆ 2000 ರೂ.ಗಳ ಗೌರವಧನವನ್ನು ಪಾವತಿಸಲಾಗುವುದು. ಜಿಲ್ಲಾವಾರು ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ.

**ಜಿಲ್ಲಾ ತಾಂತ್ರಿಕ ಸಲಹೆಗಾರರು**

ಜಿಲ್ಲಾಡಳಿತದ ಸಮನ್ವಯದೊಂದಿಗೆ ಖಾಸಗಿ ನಿವಾಸಿಗಳಿಗೆ, ಮೇಲ್ವಿಚಾರಕರಿಗೆ, ಮಾಸ್ಟರ್ ತರಬೇತುದಾರರಿಗೆ ಹಾಗೂ ವಿವಿಧ ಮಟ್ಟದ ವಿವಿಧ ಇಲಾಖೆಗಳ ನೋಡಲ್ ಅಧಿಕಾರಿಗಳಿಗೆ ಬೆಳೆ ಸಮೀಕ್ಷೆಯ ಕುರಿತು ತಾಂತ್ರಿಕ ಸಲಹೆಗಳನ್ನು ನೀಡಲು ಹಾಗೂ ಅದರಡಿ ಉದ್ಭವಿಸುವ ತಾಂತ್ರಿಕ ಸಮಸ್ಯೆಗಳನ್ನು ನಿವಾರಿಸುವ ಸಲುವಾಗಿ ಪ್ರತಿ ಜಿಲ್ಲಾ ಮಟ್ಟದಲ್ಲಿ 5 ಜಿಲ್ಲಾ ತಾಂತ್ರಿಕ ಸಲಹೆಗಾರರನ್ನು ನೇಮಿಸಿ ತಾಂತ್ರಿಕ ಸಲಹೆಗಳನ್ನು ನೀಡುವುದಕ್ಕಾಗಿ ವರ್ಷಕ್ಕೆ ರೂ.3000/- ರಂತೆ ಜಿಲ್ಲಾ ಮಟ್ಟದಲ್ಲಿ ಗೌರವಧನವನ್ನು ಪಾವತಿಸುವುದು. ಜಿಲ್ಲಾವಾರು ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ.

**ಕಾರ್ಯಕ್ರಮದ ಕರಿತು ಅರಿವು ಮೂಡಿಸುವ ಕಾರ್ಯಕ್ರಮ**

ಬೆಳೆ ಸಮೀಕ್ಷೆಗೆ ಸಂಬಂಧಿಸಿದಂತೆ, ರೈತರ ಮೊಬೈಲ್ ಆಪ್ ಮೂಲಕ ಬೆಳೆ ವಿವರಗಳನ್ನು ಸಂಗ್ರಹಿಸುವ, ಆ ಗ್ರಾಮ ವ್ಯಾಪ್ತಿಯಲ್ಲಿ ಸಮೀಕ್ಷೆ ಮಾಡುವ ಖಾಸಗಿ ನಿವಾಸಿಗಳ ವಿವರಗಳು ಬೆಳೆ ಸಮೀಕ್ಷೆಯ ಉದ್ದೇಶ ಮತ್ತು ಮಹತ್ವ, ಮರುಸಮೀಕ್ಷೆ ಹಾಗೂ ಬೆಳೆ ದರ್ಶಕ್ ಮತ್ತು ವೆಬ್ ಆಪ್ ಮೂಲಕ ಬೆಳೆ ಸಮೀಕ್ಷೆಗೆ ಸಂಬಂಧಿಸಿದ ಆಕ್ಷೇಪಣೆಗಳನ್ನು ದಾಖಲಿಸುವ ಕುರಿತಾದ ಮಾಹಿತಿ ಮತ್ತು ಇತರೆ ಮಾಹಿತಿ ಕುರಿತು ಜನಪ್ರತಿನಿಧಿಗಳು ಹಾಗೂ ರೈತರಲ್ಲಿ ಹೆಚ್ಚಿನ ಅರಿವನ್ನು ಮೂಡಿಸುವ ಸಲುವಾಗಿ ಗ್ರಾಮ ಸಭೆಗಳನ್ನು ಆಯೋಜಿಸುವುದು. ವಿವಿಧ ಹಂತಗಳಲ್ಲಿ ತರಬೇತಿಗಳನ್ನು ಏರ್ಪಡಿಸುವುದು ಬೆಳೆ ಸಮೀಕ್ಷೆ ಕಾರ್ಯಕ್ರಮದ ಕುರಿತಾದ ಮಾಹಿತಿಯನ್ನೊಳಗೊಂಡ ಬ್ಯಾನರ್, ಪೋಸ್ಟರ್ಸ್ ಮತ್ತು ಕರಪತ್ರಗಳನ್ನು ಮುದ್ರಿಸಿ ಹಂಚುವುದು. ರೈತ ಸಂಪರ್ಕ ಕೇಂದ್ರ, ಹಾಲು ಉತ್ಪಾದಕ ಸಹಕಾರ ಸಂಘ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಗ್ರಾಮ ಪಂಚಾಯತಿ, ನಾಡಕಛೇರಿ ಮತ್ತು ಹೆಚ್ಚಿನ ಜನಸಂದಣಿ ಇರುವ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಲು ಕ್ರಮ ಕೈಗೊಳ್ಳುವುದು.

ಪತ್ರಿಕಾ ಮತ್ತು ದೃಶ್ಯ ಮಾಧ್ಯಮದ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ವ್ಯಾಪಕ ಪ್ರಚಾರವನ್ನು ನೀಡುವುದು ಆಯಾ ಜಿಲ್ಲೆಯ ಜಿಲ್ಲಾಡಳಿತದ ಜವಾಬ್ದಾರಿಯಾಗಿರುತ್ತದೆ.

ಮುಂದುವರೆದು, ಪ್ರಚಾರದ ಎಲ್ಲಾ ಚಟುವಟಿಕೆಗಳಿಗೆ ತಗಲುವ ವೆಚ್ಚವನ್ನು ಬೆಳೆ ಸಮೀಕ್ಷೆ ಕಾರ್ಯಕ್ರಮದಡಿ ಒದಗಿಸಿರುವ ಅನುದಾನದ ಜೊತೆಗೆ ಇಲಾಖೆಯ ಚಾಲ್ತಿ ಯೋಜನೆಗಳಾದ ಆತ್ಮಾ, NFSM, ವಾರ್ತಾ ಮತ್ತು ಪ್ರಚಾರ ಘಟಕದಡಿ ಮತ್ತು ಇತರೆ ಯೋಜನೆಗಳ ಪ್ರಚಾರ ಘಟಕಗಳಡಿ ಲಭ್ಯವಿರುವ ಅನುದಾನವನ್ನು ಬಳಸಿಕೊಳ್ಳುವುದು. ಜಿಲ್ಲಾವಾರು ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಅನುಬಂಧ-3 ರಲ್ಲಿ ನೀಡಿದೆ.

**ಮರುಸಮೀಕ್ಷೆ**

ಪ್ರತಿ ಹಂಗಾಮಿನಲ್ಲಿ ಸಮೀಕ್ಷೆ ಮಾಡಲು ನಿಗದಿಪಡಿಸಿರುವ ಕಾಲಮಿತಿಯೊಳಗೆ ಸಮೀಕ್ಷೆ ಮಾಡಿದ ದತ್ತಾಂಶವನ್ನು ಮೇಲ್ವಿಚಾರಕರು ಪರಿಶೀಲಿಸಿ ತಿರಸ್ಕರಿಸಿದ ತಾಕುಗಳನ್ನು ಮರುಸಮೀಕ್ಷೆಯ ಆಪ್ ಮೂಲಕ ದತ್ತಾಂಶವನ್ನು ಸಂಗ್ರಹಿಸಲಾಗುವುದು.

**ಬೆಳೆ ದರ್ಶಕ್ ಆಪ್ ಮೂಲಕ ಆಕ್ಷೇಪಣೆಗಳನ್ನು ಸಲ್ಲಿಸುವ ವಿಧಾನ**

ಬೆಳೆ ಸಮೀಕ್ಷೆ ಕೈಗೊಳ್ಳುವ ಸಮಯದಲ್ಲಿ ಅಥವಾ ನಂತರದಲ್ಲಿ ಬೆಳೆ ದತ್ತಾಂಶದ ಕುರಿತು ಮರುಪರಿಶೀಲಿಸಲು ಅಥವಾ ತಪ್ಪಾಗಿ ನಮೂದಾಗಿರುವುದು ಗಮನಿಸಿದಾಗ ರೈತರು ಇಲಾಖೆಯಿಂದ ಅಭಿವೃದ್ಧಿಪಡಿಸಿರುವ ಬೆಳೆ ದರ್ಶಕ್ ಆಪ್ ಅಥವಾ ವೆಬ್ ಆಪ್ ಮೂಲಕ ಆಕ್ಷೇಪಣೆಗಳನ್ನು ನಮೂದಿಸಬೇಕು. ಸದರಿ ನಮೂದಿಸಿರುವ ಆಕ್ಷೇಪಣೆಗಳ ವಿವರಗಳು ಸಂಬಂಧಪಟ್ಟ ಮೇಲ್ವಿಚಾರಕರ Login ನಲ್ಲಿ ಗೋಚರಿಸಿದಾಗ ಕೆಳಗೆ ನೀಡಿರುವ Flow Chart ನಂತೆ ಕ್ರಮ ಕೈಗೊಳ್ಳುವುದು.

**ಬೆಳೆ ಸಮೀಕ್ಷೆಯ ಶೇ.1%ರಷ್ಟು ದತ್ತಾಂಶದ ಪರಿಶೀಲನೆ**

ಬೆಳೆ ಸಮೀಕ್ಷೆಯ ಶೇ.1ರಷ್ಟು ದತ್ತಾಂಶವನ್ನು ಪರಿಶೀಲನೆ ನಡೆಸಿರುವ ಸಂಬಂಧಪಟ್ಟ ಸಿಬ್ಬಂದಿಗಳಿಗೆ, ಒಂದು ಗ್ರಾಮಕ್ಕೆ ಕನಿಷ್ಠ ಪ್ರಯಾಣದ ವೆಚ್ಚ ರೂ.500/- ಗಳಂತೆ ಪಾವತಿಸುವುದು. ಸದರಿ ವೆಚ್ಚವನ್ನು ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ರವರಿಂದ ಸಂಬಂಧಪಟ್ಟ ಜಿಲ್ಲೆಗಳ ಮುಖ್ಯಸ್ಥರುಗಳಿಗೆ ಬಿಡುಗಡೆ ಮಾಡಿ ವೆಚ್ಚ ಭರಿಸುವುದು.

ಈ ಮೇಲಿನ ವೆಚ್ಚವನ್ನು ಬೆಳೆ ವಿಮಾ ಯೋಜನೆಯಡಿ ರಾಜ್ಯ ಸರ್ಕಾರದ ಪಾಲಿನ ಮೊತ್ತವಾದ ರೂ.926.72 ಕೋಟಿಗಳಲ್ಲಿ, ಬೆಳೆ ವಿಮೆಯ ಯೋಜನೆಯ ಲೆಕ್ಕ ಶೀರ್ಷಿಕೆ : 2401-00-110-0-07ಯ ವಿವಿಧ ಉಪ ಶೀರ್ಷಿಕೆಯಡಿ ವೆಚ್ಚ ಭರಿಸುವುದು.

**ವಿವಿಧ ಸಮಿತಿಗಳ/ಇಲಾಖೆಗಳ ಪಾತ್ರ ಮತ್ತು ಜವಾಬ್ದಾರಿಗಳ ವಿವರಗಳು**

**1.ರಾಜ್ಯ ಮಟ್ಟದ ನೋಡಲ್ ಇಲಾಖೆ (ಕೃಷಿ ಇಲಾಖೆ)ಯ ಪಾತ್ರ**

ಅ. **ಬೆಳೆ ಮಾಹಿತಿ ಸಂಗ್ರಹಣೆ, ಪರಿಶೀಲನೆ ಮತ್ತು ಅನುಮೋದನೆ.**

I. ಅನುದಾನ ಗುರುತಿಸುವಿಕೆ.
II. ಬೆಳೆ ಸಮೀಕ್ಷೆ ಸಾಫ್ಟ್ ವೇರ್ ನ್ನು ಪರೀಕ್ಷಿಸುವುದು (ಯಾವುದಾದರೂ ಇದ್ದರೆ) ಮತ್ತು ಯುಎಟಿ (UAT) ಒದಗಿಸುವುದು.
III. ಖಾಸಗಿ ನಿವಾಸಿಗಳಿಗೆ ತರಬೇತಿ
IV. ಮಾಸ್ಟರ್ ತರಬೇತುದಾರರಿಗೆ ತರಬೇತಿ
V. ನಿಯಮಿತವಾಗಿ ಕ್ಷೇತ್ರ ಮಟ್ಟದ ಅಧಿಕಾರಿಗಳೊಂದಿಗೆ ಸಮಾಲೋಚನೆ
VI. ಸಾಫ್ಟ್ ವೇರ್ ಅಭಿವೃದ್ಧಿ ಮತ್ತು ಬದಲಾವಣೆಯಲ್ಲಿ ಇ-ಆಡಳಿತ ಇಲಾಖೆಯೊಂದಿಗೆ ಸಮನ್ವಯ ಸಾಧಿಸುವುದು
VII. ವ್ಯವಸ್ಥೆಯ ಅಧ್ಯಯನ ಮತ್ತು ಬದಲಾವಣೆಯ ಅವಶ್ಯಕತೆ
VIII. ಪತ್ರಗಳು, ಸುತ್ತೋಲೆಗಳು ಮತ್ತು ಸರ್ಕಾರದ ಆದೇಶಗಳ ಮೂಲಕ ಸ್ಪಷ್ಟೀಕರಣ ನೀಡುವುದು (ತಾಂತ್ರಿಕ ಮತ್ತು ಆಡಳಿತ)
IX. ಖಾಸಗಿ ನಿವಾಸಿಗಳ ನೇಮಕಾತಿಯಲ್ಲಿ ಜಿಲ್ಲಾ / ತಾಲ್ಲೂಕು ಮಟ್ಟದ ಸಮಿತಿಗಳೊಂದಿಗೆ ಸಮನ್ವಯ ಸಾಧಿಸುವುದು
X. ಬೆಳೆ ಸಮೀಕ್ಷೆಯ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು.
XI. ಖಾಸಗಿ ನಿವಾಸಿಗಳೊಂದಿಗೆ ಸಮಾಲೋಚನೆ ನಡೆಸುವುದು ಮತ್ತು ಅವರ ಸಮಸ್ಯೆಗಳನ್ನು ಪರಿಹರಿಸುವುದು
XII. ಸಹಾಯವಾಣಿ ಕೇಂದ್ರವನ್ನು ನಿರ್ವಹಿಸುವುದು

XIII. ಮಾಹಿತಿ ಸಂಗ್ರಹಣೆಯಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸಮಿತಿಗಳೊಂದಿಗೆ ಸಮನ್ವಯ ಸಾಧಿಸುವುದು

XIV. ಸಂಬಂಧಿಸಿದ (ಡೊಮೈನ್) ಇಲಾಖೆಗಳ (ಕೃಷಿ / ತೋಟಗಾರಿಕೆ / ರೇಷ್ಮೆ ಮತ್ತು ಇತರ) ಸಮಾಲೋಚನೆ ಮತ್ತು ಪರಸ್ಪರ ಪಾಲ್ಗೊಳ್ಳುವಿಕೆ ಬಗ್ಗೆ ಖಾತರಿಪಡಿಸಿಕೊಳ್ಳುವುದು

XV. 3ನೇ ಬಾಹ್ಯ ಸಂಸ್ಥೆಯ ನೇಮಕಾತಿ ಮತ್ತು 3ನೇ ಬಾಹ್ಯ ಸಂಸ್ಥೆಯ ದತ್ತಾಂಶ/ಮಾಹಿತಿಯ ವಿಶ್ಲೇಷಣೆ

XVI. ಆಗಿಂದಾಗ್ಗೆ ಬರುವ ಸಮಸ್ಯೆಗಳ ಕುರಿತು ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಯ ಮುಂದೆ ಮಂಡಿಸಿ ಅವುಗಳ ಬಗ್ಗೆ ತೀರ್ಮಾನಗಳನ್ನು/ ಪರಿಹಾರಗಳನ್ನು ಪಡೆಯುವುದು

XVII. ಜಿಲ್ಲಾ ಮಟ್ಟದಲ್ಲಿ ಎಲ್ಲಾ ಇಲಾಖೆಗಳು ಮಾಹಿತಿ ಸಂಗ್ರಹಣೆ ಮತ್ತು ಪರಿಶೀಲನೆ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು.

XVIII. ಬೆಳೆ ದತ್ತಾಂಶ/ಮಾಹಿತಿಯನ್ನು ಅಂತಿಮಗೊಳಿಸುವಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುವುದು.

XIX. ತಾಲ್ಲೂಕು ಮಟ್ಟದಲ್ಲಿ ಗುಣಮಟ್ಟದ ಖಾತರಿ, ಅಧಿಕಾರಿಗಳ ನೇಮಕಾತಿಯನ್ನು ಖಚಿತಪಡಿಸಿಕೊಳ್ಳುವುದು.

XX. ಮಾಹಿತಿಯ ಗುಣಮಟ್ಟವನ್ನು ತಿಳಿದುಕೊಳ್ಳುವಲ್ಲಿ ಮತ್ತು ಸರಿಪಡಿಸುವ ಕ್ರಮ ತೆಗೆದುಕೊಳ್ಳುವಲ್ಲಿ ನಿಯತಕಾಲಿಕವಾಗಿ ಗುಣಮಟ್ಟದ ಖಾತರಿ ಅಧಿಕಾರಿಗಳೊಂದಿಗೆ ವಿಮರ್ಶೆ ಮಾಡುವುದು

XXI. ಖಾಸಗಿ ನಿವಾಸಿಗಳಿಗೆ ಗೌರವಧನವನ್ನು ಪಾವತಿಸಲು ಕ್ರಮ ಕೈಗೊಳ್ಳುವುದು.

XXII. ಇ-ಆಡಳಿತ ಇಲಾಖೆಯ ಕೋರಿಕೆಯಂತೆ ಸಾಫ್ಟ್ ವೇರ್‌ಗಳ ತೃಪ್ತಿದಾಯಕ ಕಾರ್ಯಕ್ಷಮತೆಯ ಲೆಕ್ಕಪರಿಶೋಧನೆ ಮತ್ತು ಪ್ರಮಾಣೀಕರಣ.

XXIII. ಯೋಜನಾ ಉಸ್ತುವಾರಿ ಘಟಕ (ಪಿಎಂಯು) / ಬೆಳೆ ಸಮೀಕ್ಷೆ ಕಾರ್ಯತಂಡದ ನಿರ್ವಹಣೆ.

**ಆ. ಬೆಳೆ ದತ್ತಾಂಶ ಬಳಕೆ**

I. ಕಂದಾಯ, ಆಹಾರ, ಕೃಷಿ, ತೋಟಗಾರಿಕೆ, ರೇಷ್ಮೆ, ಕೃಷಿ ಮಾರುಕಟ್ಟೆ ಮುಂತಾದ ಬಳಕೆದಾರ ಇಲಾಖೆಗಳೊಂದಿಗೆ ಸಂವಹನ ಮತ್ತು ಸಹಕಾರ

II. ಅವರ ಅವಶ್ಯಕತೆ ಬಗ್ಗೆ ತಿಳಿಯುವುದು

III. ಇ-ಆಡಳಿತ ಇಲಾಖೆಯಿಂದ ನೋಡಲ್ ಇಲಾಖೆಗೆ ಮತ್ತು ತನ್ಮೂಲಕ ಇತರೆ ಇಲಾಖೆಗಳಿಗೆ ಒದಗಿಸಿದ ಸಾಫ್ಟ್ ವೇರ್‌ಗಳ ಪರಿಶೋಧನೆ, ಪರೀಕ್ಷೆ ಮತ್ತು ಯುಏಟಿ(User Acceptance Testing)

IV. ಇಲಾಖೆಗಳಿಗೆ ಅವರ ಅಗತ್ಯಕ್ಕೆ ಅನುಗುಣವಾಗಿ ಮಾಹಿತಿಯನ್ನು ಒದಗಿಸುವುದು.

V. ಸಾಫ್ಟ್ ವೇರ್ ನವೀಕರಣ ಅಥವಾ ಬದಲಾವಣೆಗಳು ಮತ್ತು ಮಾಹಿತಿಗೆ ಸಂಬಂಧಿತ ಸಮಸ್ಯೆಗಳಿಗೆ ಇ-ಆಡಳಿತ ಇಲಾಖೆಯೊಂದಿಗೆ ಸಮನ್ವಯ

**2. ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಯ (ಎಸ್‌ಎಲ್‌ಎಂಸಿ) ಪಾತ್ರ**

a) ಬೆಳೆ ಸಮೀಕ್ಷೆಯ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು.

b) ಬೆಳೆ ಸಮೀಕ್ಷೆ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ವಿವಿಧ ಘಟಕಗಳಿಗೆ ನಿರ್ದೇಶನಗಳನ್ನು ನಿಗದಿತ ಸಮಯದೊಳಗೆ ನೀಡುವುದು.

c) ಸರ್ಕಾರದಲ್ಲಿ ಬೆಳೆ ಸಮೀಕ್ಷೆಯ ಮಾಹಿತಿಯ ಬಳಕೆಯನ್ನು ನಿರ್ಧರಿಸುವುದು

d) ನೋಡಲ್ ಇಲಾಖೆಯು ಅನುಷ್ಠಾನದ ಹಂತದಲ್ಲಿ ಕೇಳುವ ವಿಷಯಗಳ ಬಗ್ಗೆ ನಿರ್ಧಾರಗಳನ್ನು ನೀಡುವುದು.

e) ಮಾಹಿತಿ ಸಂಗ್ರಹಣೆ ಅವಧಿಯಲ್ಲಿ ವಾರಕ್ಕೊಮ್ಮೆ ಹಾಗೂ ಮಾಹಿತಿ ಬಳಕೆ ಅವಧಿಯಲ್ಲಿ ತಿಂಗಳಿಗೊಮ್ಮೆ ಸಭೆ ಆಯೋಜನೆ

**3. ಜಿಲ್ಲಾ ಆಡಳಿತದ ಪಾತ್ರ**

a) ಜಿಲ್ಲಾಧಿಕಾರಿಗಳು ಜಿಲ್ಲಾಮಟ್ಟದ ಅನುಷ್ಠಾನ ಪ್ರಾಧಿಕಾರವಾಗಿರುತ್ತಾರೆ.

b) ಮಾಹಿತಿ/ದತ್ತಾಂಶ ಸಂಗ್ರಹಣೆ ಚಟುವಟಿಕೆಯಲ್ಲಿ ಕೃಷಿ ಮತ್ತು ಎಲ್ಲಾ ಸಂಬಂಧಿತ ಇಲಾಖೆಗಳ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸುವುದು

c) ಕಂದಾಯ, ಕೃಷಿ, ರೇಷ್ಮೆ, ತೋಟಗಾರಿಕೆ ಮತ್ತು ನೀರಾವರಿ ಇಲಾಖೆಗಳ ಸರ್ಕಾರಿ ಅಧಿಕಾರಿಗಳಿಗೆ ಉಸ್ತುವಾರಿ ಮಾಡಲು ಗ್ರಾಮಗಳ ಹಂಚಿಕೆ ಮಾಡುವುದು
d) ಬೆಳೆ ಸಮೀಕ್ಷೆ ಚಟುವಟಿಕೆಯನ್ನು ನಡೆಸಲು ಖಾಸಗಿ ನಿವಾಸಿಗಳಿಗೆ ನಿಗದಿಪಡಿಸಿದ ಪ್ರತಿಯೊಂದು ಹಳ್ಳಿಗೆ ಒಬ್ಬ ಅಥವಾ ಹೆಚ್ಚಿನ ಖಾಸಗಿ ನಿವಾಸಿಗಳ ಗುರುತಿಸುವಿಕೆ ಮತ್ತು ನೇಮಕಾತಿಯನ್ನು ಮೇಲ್ವಿಚಾರಣೆ ಮಾಡುವುದು.
e) ತಾಲ್ಲೂಕು ಮಟ್ಟದಲ್ಲಿ ಮಾಸ್ಟರ್ ತರಬೇತುದಾರರ ಮೂಲಕ ಖಾಸಗಿ ನಿವಾಸಿಗಳಿಗೆ / ತರಬೇತಿ
f) ಬೆಳೆ ಸಮೀಕ್ಷೆ ಚಟುವಟಿಕೆಯ ಕುರಿತು ಪ್ರಚಾರ ಮತ್ತು ಜಾಹೀರಾತು
g) ಖಾಸಗಿ ನಿವಾಸಿಗಳು ನಮೂದಿಸಿದ ಬೆಳೆ ಮಾಹಿತಿಯನ್ನು ಪರಿಶೀಲಿಸಿ, ಫೋಟೋ ಮತ್ತು ನಮೂದಿಸಿದ ಹೆಸರನ್ನು ತಾಳೆ ಮಾಡಿ ಅದನ್ನು ಅನುಮೋದಿಸುವುದು/ ದೃಢೀಕರಿಸುವುದು
h) ಪ್ರಗತಿಯನ್ನು ಉಸ್ತುವಾರಿ ಮಾಡುವುದು ಮತ್ತು ಮಾಹಿತಿಯನ್ನು ಪ್ರಮಾಣೀಕರಿಸುವುದು. ನಂತರ ಇತರೆ ಎಲ್ಲಾ ಇಲಾಖೆಗಳು ಇದನ್ನು ಉಪಯೋಗಿಸಿಕೊಳ್ಳಬಹುದು
i) ದಿನಾಂಕ: 06-05-2005 ರ ಕಂದಾಯ ಇಲಾಖೆಯ ಅಧಿಸೂಚನೆಯಂತೆ ರಚಿಸಿರುವ ಜಿಲ್ಲಾ ಮತ್ತು ತಾಲೂಕು ಮಟ್ಟದ ಸಮಿತಿಗಳ ಮೂಲಕ ಸಂಗ್ರಹಿಸಲಾದ ಮಾಹಿತಿಯನ್ನು ವಾರಕ್ಕೊಮ್ಮೆ ಪರಿಶೀಲಿಸುವುದು ಮತ್ತು ಅವಶ್ಯಕತೆ ಇದ್ದಾಗ ಸರಿಪಡಿಸುವಲ್ಲಿ ಕ್ರಮಗಳನ್ನು ಕೈಗೊಳ್ಳುವುದು
j) ಕಂದಾಯ ಇಲಾಖೆಯ ಅಧಿಸೂಚನೆಯಂತೆ ಗ್ರಾಮ ಮತ್ತು ಹೋಬಳಿ ಮಟ್ಟದಲ್ಲಿ ಸಂಗ್ರಹಿಸಲಾದ ಮಾಹಿತಿಯನ್ನು ಅನುಮೋದಿಸಲು ಅಧಿಕಾರಿಗಳ ತಂಡವನ್ನು ರಚಿಸುವುದು

**4. ಇ-ಆಡಳಿತ ಇಲಾಖೆಯ ಪಾತ್ರ**

a) ಎಸ್.ಡಿ.ಸಿ.ಯಲ್ಲಿ ಹಾರ್ಡ್‌ವೇರ್ ಮೂಲಸೌಕರ್ಯ
b) ಬೆಳೆ ಸಮೀಕ್ಷೆ ಮತ್ತು ಬೆಳೆ ಸಮೀಕ್ಷೆ ಮಾಹಿತಿಯ ಬಳಕೆಗೆ ಅಗತ್ಯವಿರುವ ಬೆಳೆ ಸಮೀಕ್ಷೆ ಆ್ಯಪ್ ಗಳ ಅಭಿವೃದ್ಧಿ / ಸುಧಾರಣೆ / ಮಾರ್ಪಾಡು ಮತ್ತು ಸಾಫ್ಟ್ ವೇರ್ ಅಭಿವೃದ್ಧಿ
c) ನೋಡಲ್ ಇಲಾಖೆ ಪ್ರಮುಖ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ
d) ನೋಡಲ್ ಇಲಾಖೆ ಕೇಳುವ ಸಾಫ್ಟ್ ವೇರ್ ಸಂಬಂಧಿತ ಸಮಸ್ಯೆಗಳನ್ನು ಅಭಿವೃದ್ಧಿ ತಂಡದೊಂದಿಗೆ ಸಮನ್ವಯಗೊಳಿಸುವ ಮೂಲಕ ಪರಿಹರಿಸುವುದು

**5. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ:**

a) ಮೊಬೈಲ್ ಆ್ಯಪ್ ಗಳಲ್ಲಿ ಹೆಚ್ಚುವರಿ ಕ್ಷೇತ್ರವನ್ನು ಅಪ್ ಲೋಡ್ ಮಾಡಬೇಕಾದಲ್ಲಿ ಸಲಹೆಗಳನ್ನು ನೀಡುವುದು
b) ನಿಯತಕಾಲಿಕವಾಗಿ ಮಾಹಿತಿಯನ್ನು ರಾಜ್ಯ ಮಟ್ಟದಲ್ಲಿ ಮೇಲ್ವಿಚಾರಣೆ ಮಾಡುವುದು
c) ರಾಜ್ಯ ಮಟ್ಟದಲ್ಲಿ ಕೃಷಿ ಇಲಾಖೆ ಯೋಜನೆಯನ್ನು ಚಾಲನೆ ಮಾಡುತ್ತದೆ. ಡಿಇಎಸ್ ಸಹ ಇದರಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಮತ್ತು ಕಂದಾಯ ಇಲಾಖೆಯ ಆರ್‌ಡಿ 23 ಇಎಲ್‌ಆರ್ 2004 ದಿನಾಂಕ: 06 ಮೇ 2005 ರಂತೆ ರಚಿಸಿರುವ ಜಿಲ್ಲಾ, ತಾಲೂಕು ಮತ್ತು ಹೋಬಳಿ ಮಟ್ಟದ ಸಮಿತಿಗಳು ಮಾಹಿತಿ/ದತ್ತಾಂಶಕ್ಕೆ ಸಹಿ ಮಾಡುವುದನ್ನು ಖಾತರಿಪಡಿಸಿಕೊಳ್ಳುವುದು. ಕಂದಾಯ ಇಲಾಖೆಯ ಅಧಿಸೂಚನೆಯನ್ನು ಮಾರ್ಪಡಿಸಲಾಗುವುದು ಮತ್ತು ಬೆಳೆ ಸಮೀಕ್ಷೆ ಯೋಜನೆ ಅಡಿ ಸಂಗ್ರಹಿಸಲಾದ ಮಾಹಿತಿಯನ್ನು ಮಾತ್ರ ಬೆಳೆ ಪರಿಗಣನೆ ಮತ್ತು ಇತರೆ ಎಲ್ಲಾ ಸರ್ಕಾರಿ ಉದ್ದೇಶಗಳಿಗಾಗಿ ಪರಿಗಣಿಸಲಾಗುವುದು ಎಂದು ಸ್ಪಷ್ಟೀಕರಿಸುವುದು
d) ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ವತಿಯಿಂದ ಮಾಹಿತಿಯನ್ನು ಅನುಮೋದಿಸುವುದರಿಂದ, ಶೇ.1ರಷ್ಟು ಮಾಹಿತಿಯ ಮೂರನೇ ವ್ಯಕ್ತಿಯ ಲೆಕ್ಕಪರಿಶೋಧನೆ ಮಾಡುವುದನ್ನು ಜಿಲ್ಲಾ ಸಾಂಖ್ಯಿಕ ಅಧಿಕಾರಿ ಅಥವಾ ಜಿಲ್ಲಾ /

ತಾಲ್ಲೂಕು ಮಟ್ಟದಲ್ಲಿ ಲಭ್ಯವಿರುವ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಪ್ರತಿನಿಧಿಯಿಂದ ಕೈಗೊಳ್ಳಲು ನಿರ್ಧರಿಸಲಾಗಿದೆ.

**6. ಕಂದಾಯ, ಕೃಷಿ, ತೋಟಗಾರಿಕೆ, ರೇಷ್ಮೆ ಮತ್ತು ನೀರಾವರಿ ಇಲಾಖೆಗಳು**

a) ಬೆಳೆ ಸಮೀಕ್ಷೆಯ ಚಟುವಟಿಕೆಯನ್ನು ಮೇಲ್ವಿಚಾರಣೆ ಮಾಡಲು ಅವರ ಎಲ್ಲಾ ಕ್ಷೇತ್ರ ಮಟ್ಟದ ಅಧಿಕಾರಿಗಳು / ಸಿಬ್ಬಂದಿಗೆ ನಿರ್ದೇಶನಗಳನ್ನು ನೀಡುವ ಮೂಲಕ ಜಿಲ್ಲಾ ಆಡಳಿತಕ್ಕೆ ಸಹಾಯ ಮಾಡುವುದು.

b) ಕೃಷಿ ಇಲಾಖೆಯು ನೋಡಲ್ ಇಲಾಖೆಯಾಗಿದ್ದು, ರಾಜ್ಯ ಮಟ್ಟದಲ್ಲಿ ಯೋಜನೆಯನ್ನು ಪ್ರಸಕ್ತ ಸಾಲಿನಲ್ಲಿ ಚಾಲನೆ ಮಾಡುತ್ತದೆ. ಮುಂದಿನ ಆರ್ಥಿಕ ವರ್ಷದಿಂದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯಕ್ಕೆ ವರ್ಗಾಯಿಸುವ ಬಗ್ಗೆ ಪರಿಶೀಲಿಸಲಾಗುವುದು. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ದತ್ತಾಂಶವನ್ನು ಸಮನ್ವಯಗೊಳಿಸುವುದನ್ನು ಮುಂದುವರಿಸಿ, ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದ ಸಮಿತಿಯ ಅನುಮೋದನೆಯನ್ನು ಪಡೆದು ಅಂತಿಮ ಮಾಹಿತಿ/ ದತ್ತಾಂಶವನ್ನು ಸಹಿ ಮಾಡುತ್ತದೆ

c) ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಒಟ್ಟಾರೆ ಯೋಜನೆಯ ಉಸ್ತುವಾರಿ ವಹಿಸಲಿದ್ದು, ಖಾಸಗಿ ನಿವಾಸಿಗಳು ಯೋಜನೆಯ ದೈನಂದಿನ ಮೇಲ್ವಿಚಾರಣೆಯನ್ನು ಜಿಲ್ಲಾ ಮಟ್ಟದಲ್ಲಿ ಜಂಟಿ ಕೃಷಿ ನಿರ್ದೇಶಕರು ಮತ್ತು ರಾಜ್ಯ ಮಟ್ಟದಲ್ಲಿ ಕೃಷಿ ಆಯುಕ್ತರು ವಹಿಸಲಿದ್ದಾರೆ

d) ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಯ ಉಪ ಸಮಿತಿಯನ್ನು ಕೃಷಿ ಆಯುಕ್ತರ ಅಧ್ಯಕ್ಷತೆಯಲ್ಲಿ ತೋಟಗಾರಿಕೆ, ರೇಷ್ಮೆ ಇಲಾಖೆಗಳ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಇತರೆ ಸದಸ್ಯರನ್ನೊಳಗೊಂಡಂತೆ ರಚಿಸಲಾಗುವುದು.

**7. ತಹಶೀಲ್ದಾರ್ ಗಳು**

a) ತಾಲ್ಲೂಕು ಮಟ್ಟದ ಸಮಿತಿಯ ಮೂಲಕ ಕಂದಾಯ, ಕೃಷಿ, ರೇಷ್ಮೆ, ತೋಟಗಾರಿಕೆ ಮತ್ತು ನೀರಾವರಿ ಇಲಾಖೆಗಳ ಸರ್ಕಾರಿ ಅಧಿಕಾರಿಗಳಿಗೆ ಗ್ರಾಮ (ಗಳನ್ನು) ಹಂಚಿಕೆ ಮಾಡುವುದು

b) ತಾಲ್ಲೂಕು ಮಟ್ಟದ ಸಮಿತಿಯ ಮೂಲಕ ಬೆಳೆ ಸಮೀಕ್ಷೆ ಚಟುವಟಿಕೆಯನ್ನು ನಡೆಸಲು ಗ್ರಾಮದ ಪ್ರತಿಯೊಬ್ಬರಿಗೂ ಖಾಸಗಿ ನಿವಾಸಿಗಳನ್ನು ಗುರುತಿಸುವುದು ಮತ್ತು ನೇಮಕ ಮಾಡುವುದು

c) ತಾಲ್ಲೂಕು ಮಟ್ಟದ ಸಮಿತಿಯ ಮೂಲಕ ಸರ್ಕಾರಿ ಅಧಿಕಾರಿಗಳ ಅಡಿ ಕಾರ್ಯ ನಿರ್ವಹಿಸಲು ಹಳ್ಳಿಗಳಿಗೆ ಖಾಸಗಿ ನಿವಾಸಿಗಳ ಹಂಚಿಕೆ

d) ಮಾಸ್ಟರ್ ತರಬೇತುದಾರರ ಮೂಲಕ ಖಾಸಗಿ ನಿವಾಸಿಗಳಿಗೆ ತರಬೇತಿ

e) ಯೋಜನೆಯ ಪ್ರಗತಿಯನ್ನು ಉಸ್ತುವಾರಿ ಮಾಡುವುದು

f) ದಿನಾಂಕ: 06-05-2005 ರ ಕಂದಾಯ ಇಲಾಖೆಯ ಅಧಿಸೂಚನೆಯಂತೆ ರಚಿಸಿರುವ ತಾಲ್ಲೂಕು ಮಟ್ಟದ ಸಮಿತಿಗಳ ಮೂಲಕ ಸಂಗ್ರಹಿಸಲಾದ ಮಾಹಿತಿಯನ್ನು ವಾರಕ್ಕೊಮ್ಮೆ ಪರಿಶೀಲಿಸುವುದು ಮತ್ತು ಅವಶ್ಯಕತೆ ಇದ್ದಾಗ ಸರಿಪಡಿಸುವಲ್ಲಿ ಕ್ರಮಗಳನ್ನು ಕೈಗೊಳ್ಳುವುದು

g) ಕಂದಾಯ ಇಲಾಖೆಯ ಅಧಿಸೂಚನೆಯಂತೆ ಗ್ರಾಮ ಮತ್ತು ಹೋಬಳಿ ಮಟ್ಟದಲ್ಲಿ ಸಂಗ್ರಹಿಸಲಾದ ಮಾಹಿತಿಯನ್ನು ಅನುಮೋದಿಸಲು ಅಧಿಕಾರಿಗಳ ತಂಡವನ್ನು ರಚಿಸುವುದು

**8. ತಾಲ್ಲೂಕು ಮಟ್ಟದ ಗುಣಮಟ್ಟದ ಖಾತರಿ ಅಧಿಕಾರಿ ( QAO):**

a) ಕೃಷಿ, ರೇಷ್ಮೆ ಮತ್ತು ತೋಟಗಾರಿಕೆ ಇಲಾಖೆಗಳಿಂದ ಒಬ್ಬ ತಾಲೂಕು ಮಟ್ಟದ ಅಧಿಕಾರಿಯನ್ನು ಗುಣಮಟ್ಟದ ಖಾತರಿ (ಕ್ಯೂಎ) ಅಧಿಕಾರಿಯಾಗಿ ನೇಮಿಸಲಾಗುವುದು

b) ಮಾಹಿತಿಯನ್ನು ಸಮಗ್ರವಾಗಿ ಉಸ್ತುವಾರಿ/ ಮೇಲ್ವಿಚಾರಣೆ ಮಾಡುವುದು

c) ಕ್ಷೇತ್ರದಿಂದ ಬರುವ ಮಾಹಿತಿಯ ಗುಣಮಟ್ಟವನ್ನು ನಿಯತಕಾಲಿಕವಾಗಿ ಪರಿಶೀಲಿಸಲು ಮತ್ತು ಅಗತ್ಯವಿರುವ ಕಡೆ ಪುನರ್ ಸಮೀಕ್ಷೆ ಮಾಡಲು ಸಂಬಂಧಿಸಿದ ಮೇಲ್ವಿಚಾರಕರಿಗೆ ತಿಳಿಸುವುದು.

d) ಉತ್ತಮ ಗುಣಮಟ್ಟದ ಮಾಹಿತಿಯನ್ನು ಪಡೆಯುವುದು ಹಾಗೂ ಮಾಹಿತಿಯನ್ನು ಸ್ವೀಕರಿಸುವ ಮೇಲ್ವಿಚಾರಕರನ್ನು ಮೇಲ್ವಿಚಾರಣೆ ಮಾಡುವುದು ಇವರ ಜವಾಬ್ದಾರಿಯಾಗಿರುತ್ತದೆ.

**9.ಗ್ರಾಮದ ಉಸ್ತುವಾರಿ ಸರ್ಕಾರಿ ಅಧಿಕಾರಿಗಳು**

a) ಅವರಿಗೆ ನಿಗದಿಪಡಿಸಿದ ಗ್ರಾಮಗಳಲ್ಲಿ ಬೆಳೆ ಸಮೀಕ್ಷೆ ಚಟುವಟಿಕೆಯನ್ನು ನಡೆಸಲು ಪ್ರತಿ ಗ್ರಾಮಕ್ಕೆ ಒಬ್ಬ ಅಥವಾ ಹೆಚ್ಚಿನ ಖಾಸಗಿ ನಿವಾಸಿಗಳ ಗುರುತಿಸುವಿಕೆ

b) ಅಧಿಕಾರಿಗಳ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಸಗಿ ನಿವಾಸಿಗಳು ನಮೂದಿಸಿದ ಬೆಳೆ ಮಾಹಿತಿಯನ್ನು ಪರಿಶೀಲಿಸಿ, ಛಾಯಾಚಿತ್ರ ಮತ್ತು ನಮೂದಿಸಿದ ಹೆಸರನ್ನು ತಾಳೆ ಮಾಡಿ ಅದನ್ನು ಅನುಮೋದಿಸುವುದು.

c) ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಮಾಹಿತಿಯನ್ನು ಪ್ರಮಾಣೀಕರಿಸುವುದು. ನಂತರ ಇತರೆ ಎಲ್ಲಾ ಇಲಾಖೆಗಳು ಇದನ್ನು ಉಪಯೋಗಿಸಿಕೊಳ್ಳಬಹುದು

ಕೃಷಿ ನಿರ್ದೇಶಕರು

# ಅನುಷ್ಠಾನದ ವೇಳಾ ಪಟ್ಟಿ(ತಾತ್ಕಾಲಿಕ)

| ಚಟುವಟಿಕೆ | ಸಂಸ್ಥೆ | ವೇಳಾಪಟ್ಟಿ | | | |
|---|---|---|---|---|---|
| | | ಪೂರ್ವ ಮುಂಗಾರು | ಮುಂಗಾರು | ಹಿಂಗಾರು | ಬೇಸಿಗೆ |
| ವಿವರಗಳನ್ನು ಅಪ್ ಲೋಡ್ ಮಾಡಲು ರೈತರು ಬಳಸಬೇಕಾದ ಮೊಬೈಲ್ ಆ್ಯಪ್ ಮತ್ತು ತಂತ್ರಾಂಶದ ಬಿಡುಗಡೆ | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) | 01-05-2022 ರಿಂದ 25-05-2022 | 01-07-2022 ರಿಂದ 31-07-2022 | 01-11-2022 ರಿಂದ 30-11-2022 | 01-03-2023 ರಿಂದ 15-03-2023 |
| ಖಾಸಗಿ ನಿವಾಸಿಗಳ ನೇಮಕಾತಿ ಮತ್ತು ಐಇಸಿ ಪ್ರಾರಂಭಿಸುವುದು | ತಾಲ್ಲೂಕು ಮಟ್ಟದ ಸಮಿತಿ | 01-05-2022 | 01-07-2022 | 01-11-2022 | 01-03-2023 |
| ಸರ್ಕಾರಿ ಅಧಿಕಾರಿಗಳಿಗೆ ಗ್ರಾಮಗಳ ಹಂಚಿಕೆ | ತಾಲ್ಲೂಕು ಮಟ್ಟದ ಸಮಿತಿ | 01-05-2022 | 01-07-2022 | 01-11-2022 | 01-03-2023 |
| ಮಾಸ್ಟರ್ ತರಬೇತಿದಾರರಿಗೆ ತರಬೇತಿ | ಕೃಷಿ ಇಲಾಖೆ | 02-05-2022 | 02-07-2022 | 02-11-2022 | 02-03-2023 |
| ಖಾಸಗಿ ನಿವಾಸಿಗೆ ಸಾಟ್ ಕಾಮ್ ಮೂಲಕ ತರಬೇತಿ | ಕೃಷಿ ಇಲಾಖೆ | 03-05-2022 | 03-07-2022 | 03-11-2022 | 03-03-2023 |
| ಮಾಸ್ಟರ್ ತರಬೇತುದಾರರಿಂದ ಖಾಸಗಿ ನಿವಾಸಿ ಎರಡನೇ ತರಬೇತಿ | ಜಿಲ್ಲಾ ಆಡಳಿತ | 04-05-2022 | 04-07-2022 | 04-11-2022 | 04-03-2023 |
| ರೈತರಿಂದ ಬೆಳೆ ಸಮೀಕ್ಷೆ ಚಟುವಟಿಕೆಯ ಪ್ರಾರಂಭ | ಜಿಲ್ಲಾ ಆಡಳಿತ ಮತ್ತು ರೈತರು | 01-05-2022 | 01-07-2022 | 01-11-2022 | 01-03-2023 |
| ರೈತರಿಗೆ ಬೆಳೆ ಸಂಬಂಧಿತ ವಿವರಗಳನ್ನು ಅಪ್ ಲೋಡ್ ಮಾಡಲು ಕೊನೆಯ ದಿನಾಂಕ | ರೈತರು | 25-05-2022 | 31-07-2022 | 30-11-2022 | 15-03-2023 |
| ಖಾಸಗಿ ನಿವಾಸಿಯಿಂದ ಬೆಳೆ ಸಮೀಕ್ಷೆಯ ಪ್ರಾರಂಭ ಮತ್ತು ಪೂರ್ಣಗೊಳಿಸುವಿಕೆ | ತಾಲ್ಲೂಕು ಮಟ್ಟದ ಸಮಿತಿಗಳು | 26-05-2022 ರಿಂದ 30-06-2022 | 01-08-2022 ರಿಂದ 31-10-2022 | 01-12-2022 ರಿಂದ 28-02-2023 | 16-03-2023 ರಿಂದ 30-04-2023 |
| ಸರ್ಕಾರಿ ಅಧಿಕಾರಿಗಳಿಂದ ಬೆಳೆ ಸಮೀಕ್ಷೆ ಮಾಹಿತಿಯ ಸಂಪೂರ್ಣ ಪರಿಶೀಲನೆ ಮತ್ತು ಪ್ರಮಾಣೀಕರಣ | ಸರ್ಕಾರದ ಅಧಿಕಾರಿಗಳು | 31-07-2022 | 30-11-2022 | 31-03-2023 | 31-05-2023 |

ಕೃಷಿ ನಿರ್ದೇಶಕರು

REVISED

# ಅನುಬಂಧ-1

## 2022-23ನೇ ಸಾಲಿನಲ್ಲಿ ಸಮೀಕ್ಷೆ ಮಾಡಲು ವಿವಿಧ ಹಂಗಾಮುವಾರು ನಿಗದಿ ಪಡಿಸಿರುವ ಒಟ್ಟು ತಾಕುಗಳ ಗುರಿ (ಸಂಖ್ಯೆಗಳಲ್ಲಿ)

| ಕ್ರ.ಸಂ | ಜಿಲ್ಲೆ | ಪೂರ್ವ ಮುಂಗಾರು | ಮುಂಗಾರು | ಹಿಂಗಾರು | ಬೇಸಿಗೆ | ಒಟ್ಟು |
|---|---|---|---|---|---|---|
| 1 | ಬೆಂಗಳೂರು (ನ) | 0 | 256631 | 1440 | 0 | 258071 |
| 2 | ಬೆಂಗಳೂರು (ಗ್ರಾ) | 0 | 475529 | 339949 | 49478 | 864956 |
| 3 | ಬಾಗಲಕೋಟೆ | 246775 | 490843 | 445257 | 286805 | 1469680 |
| 4 | ಬೆಳಗಾವಿ | 276748 | 1473476 | 1347694 | 556517 | 3654435 |
| 5 | ಬಿದರ್ | 0 | 459241 | 405017 | 0 | 864258 |
| 6 | ಬಳ್ಳಾರಿ | 0 | 392510 | 295278 | 68105 | 755893 |
| 7 | ಚಾಮರಾಜನಗರ | 371103 | 422207 | 348578 | 121617 | 1263505 |
| 8 | ಚಿಕ್ಕಮಗಳೂರು | 69566 | 572064 | 207125 | 13085 | 861840 |
| 9 | ಚಿತ್ರದುರ್ಗ | 90157 | 595021 | 559608 | 247683 | 1492469 |
| 10 | ಚಿಕ್ಕಬಳ್ಳಾಪುರ | 0 | 648075 | 613564 | 285050 | 1546689 |
| 11 | ದಾವಣಗೆರೆ | 0 | 474066 | 424704 | 192200 | 1090970 |
| 12 | ದಾರವಾಡ | 76730 | 301001 | 249767 | 53596 | 681094 |
| 13 | ದಕ್ಷಿಣ ಕನ್ನಡ | 0 | 903574 | 63332 | 0 | 966906 |
| 14 | ಗದಗ | 205833 | 302019 | 275452 | 0 | 783304 |
| 15 | ಹಾವೇರಿ | 51044 | 472921 | 452165 | 305818 | 1281948 |
| 16 | ಹಾಸನ | 450773 | 1514822 | 417079 | 116427 | 2499101 |
| 17 | ಕಲ್ಬುರ್ಗಿ | 300945 | 681834 | 316199 | 254813 | 1553791 |
| 18 | ಕೊಪ್ಪಳ | 129727 | 421711 | 231042 | 236297 | 1018777 |
| 19 | ಕೊಡಗು | 0 | 259796 | 0 | 0 | 259796 |
| 20 | ಕೋಲಾರ | 0 | 784782 | 542686 | 570373 | 1897841 |
| 21 | ಮಂಡ್ಯ | 1544278 | 1688027 | 880905 | 679182 | 4792392 |
| 22 | ಮೈಸೂರ | 1000503 | 1053059 | 635786 | 549223 | 3238571 |
| 23 | ರಾಮನಗರ | 300 | 677365 | 377385 | 503412 | 1558462 |
| 24 | ರಾಯಚೂರು | 0 | 631207 | 371406 | 0 | 1002613 |
| 25 | ಶಿವಮೊಗ್ಗ | 0 | 487533 | 45794 | 237340 | 770667 |
| 26 | ತುಮಕೂರು | 0 | 1695609 | 143387 | 82449 | 1921445 |
| 27 | ಉತ್ತರ ಕನ್ನಡ | 0 | 590482 | 138017 | 36439 | 764938 |
| 28 | ವಿಜಯನಗರ | 0 | 408885 | 392617 | 124949 | 926451 |
| 29 | ವಿಜಯಪುರ | 17262 | 564968 | 269792 | 0 | 852022 |
| 30 | ಉಡುಪಿ | 0 | 912877 | 467936 | 0 | 1380813 |
| 31 | ಯಾದಗಿರಿ | 168256 | 414765 | 150939 | 153442 | 887402 |
| | **ಒಟ್ಟು** | **5000000** | **21026900** | **11409900** | **5724300** | **43161100** |

ಕೃಷಿ ನಿರ್ದೇಶಕರು

# ಅನುಬಂಧ-2

| 2022-23 ನೇ ಸಾಲಿನ ಬೆಳೆ ಸಮೀಕ್ಷೆ ಯೋಜನೆಯಡಿ ಬೆಳೆ ಸಮೀಕ್ಷೆ ಮಾಸ್ಟರ್ ತರಬೇತಿದಾರರಿಗೆ ಮತ್ತು ಜಿಲ್ಲಾ ತಾಂತ್ರಿಕ ಸಲಹೆಗಾರರಿಗೆ ಗೌರವಧನ ಪಾವತಿಸಲು ಜಿಲ್ಲಾವಾರು ಅನುದಾನದ ಹಂಚಿಕೆ ವಿವರಗಳು (ರೂ. ಲಕ್ಷಗಳಲ್ಲಿ) | | | | | | |
|---|---|---|---|---|---|---|
| ಕ್ರ. ಸಂ | ಜಿಲ್ಲೆ | ಒಟ್ಟು ತಾಲ್ಲೂಕುಗಳು | ನಿಗದಿ ಪಡಿಸಿರುವ ತರಬೇತಿದಾರರ ಸಂಖ್ಯೆ | ಬೆಳೆ ಸಮೀಕ್ಷೆ ಮಾಸ್ಟರ್ ತರಬೇತಿದಾರರಿಗೆ ಗೌರವಧನ @2000/ಪ್ರತಿ ವರ್ಷಕ್ಕೆ | ಬೆಳೆ ಸಮೀಕ್ಷೆ ಸಲಹೆಗಾರರಿಗೆ ಗೌರವಧನ @3000/ಪ್ರತಿ ವರ್ಷಕ್ಕೆ ಪ್ರತಿ ಜಿಲ್ಲೆಗೆ 6 ಸಲಹೆಗಾರರು | ಹಂಚಿಕೆ ಮಾಡಿರುವ ಅನುದಾನದ ಒಟ್ಟು ಮೊತ್ತ (ರೂ.ಲಕ್ಷಗಳು) |
| 1 | ಬೆಂಗಳೂರ(ನ) | 5 | 20 | 0.4 | 0.18 | 0.58 |
| 2 | ಬೆಂಗಳೂರ(ಗ್ರಾ) | 4 | 16 | 0.32 | 0.18 | 0.50 |
| 3 | ಬಾಗಲಕೋಟೆ | 9 | 36 | 0.72 | 0.18 | 0.90 |
| 4 | ಬೆಳಗಾವಿ | 14 | 56 | 1.12 | 0.18 | 1.30 |
| 5 | ಬಿದರ್ | 8 | 32 | 0.64 | 0.18 | 0.82 |
| 6 | ಬಳ್ಳಾರಿ | 5 | 20 | 0.4 | 0.09 | 0.49 |
| 7 | ಚಾಮರಾಜನಗರ | 5 | 20 | 0.4 | 0.18 | 0.58 |
| 8 | ಚಿಕ್ಕಮಗಳೂರು | 8 | 32 | 0.64 | 0.18 | 0.82 |
| 9 | ಚಿತ್ರದುರ್ಗ | 6 | 24 | 0.48 | 0.18 | 0.66 |
| 10 | ಚಿಕ್ಕಬಳ್ಳಾಪುರ | 6 | 24 | 0.48 | 0.18 | 0.66 |
| 11 | ದಾವಣಗೆರೆ | 6 | 24 | 0.48 | 0.18 | 0.66 |
| 12 | ದಾರವಾಡ | 8 | 32 | 0.64 | 0.18 | 0.82 |
| 13 | ದಕ್ಷಿಣ ಕನ್ನಡ | 7 | 28 | 0.56 | 0.18 | 0.74 |
| 14 | ಗದಗ | 7 | 28 | 0.56 | 0.18 | 0.74 |
| 15 | ಹಾವೇರಿ | 8 | 32 | 0.64 | 0.18 | 0.82 |
| 16 | ಹಾಸನ | 8 | 32 | 0.64 | 0.18 | 0.82 |
| 17 | ಕಲ್ಬುರ್ಗಿ | 11 | 44 | 0.88 | 0.18 | 1.06 |
| 18 | ಕೊಪ್ಪಳ | 7 | 28 | 0.56 | 0.18 | 0.74 |
| 19 | ಕೊಡಗು | 3 | 12 | 0.24 | 0.18 | 0.42 |
| 20 | ಕೋಲಾರ | 6 | 24 | 0.48 | 0.18 | 0.66 |
| 21 | ಮಂಡ್ಯ | 7 | 28 | 0.56 | 0.18 | 0.74 |
| 22 | ಮೈಸೂರ | 8 | 32 | 0.64 | 0.18 | 0.82 |
| 23 | ರಾಮನಗರ | 4 | 16 | 0.32 | 0.18 | 0.50 |
| 24 | ರಾಯಚುರು | 7 | 28 | 0.56 | 0.18 | 0.74 |
| 25 | ಶಿವಮೊಗ್ಗ | 7 | 28 | 0.56 | 0.18 | 0.74 |
| 26 | ತುಮಕೂರು | 10 | 40 | 0.8 | 0.18 | 0.98 |
| 27 | ಉತ್ತರ ಕನ್ನಡ | 12 | 48 | 0.96 | 0.18 | 1.14 |
| 28 | ವಿಜಯನಗರ | 6 | 24 | 0.48 | 0.09 | 0.57 |
| 29 | ವಿಜಯಪುರ | 12 | 48 | 0.96 | 0.18 | 1.14 |
| 30 | ಉಡುಪಿ | 7 | 28 | 0.56 | 0.18 | 0.74 |
| 31 | ಯಾದಗಿರಿ | 6 | 24 | 0.48 | 0.18 | 0.66 |
| ಒಟ್ಟು | | **227** | **908** | **18.16** | **5.4** | **23.56** |

**ಕೃಷಿ ನಿರ್ದೇಶಕರು**

# ಅನುಬಂಧ-3

| 2022-23 ನೇ ಸಾಲಿನ ಬೆಳೆ ಸಮೀಕ್ಷೆ ಯೋಜನೆಯಡಿ ಬೆಳೆ ಸಮೀಕ್ಷೆ ಕುರಿತು ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮದ ಮೂಲಕ ಪ್ರಚಾರ ಮಾಡುವ ಸಲುವಾಗಿ ಜಿಲ್ಲಾವಾರು ಅನುದಾನದ ಹಂಚಿಕೆ ವಿವರಗಳು (ರೂ. ಲಕ್ಷಗಳಲ್ಲಿ) | | | |
|---|---|---|---|
| ಕ್ರ.ಸಂ | ಜಿಲ್ಲೆ | ಒಟ್ಟು ತಾಲ್ಲೂಕುಗಳು | ಹಂಚಿಕೆ ಮಾಡಿರುವ ಅನುದಾನದ ಒಟ್ಟು ಮೊತ್ತ (ರೂ.ಲಕ್ಷಗಳು) |
| 1 | ಬೆಂಗಳೂರ (ನ) | 5 | 6.50 |
| 2 | ಬೆಂಗಳೂರ (ಗ್ರಾ) | 4 | 5.20 |
| 3 | ಬಾಗಲಕೋಟೆ | 9 | 13.00 |
| 4 | ಬೆಳಗಾವಿ | 14 | 19.50 |
| 5 | ಬಿದರ್ | 8 | 10.40 |
| 6 | ಬಳ್ಳಾರಿ | 5 | 4.70 |
| 7 | ಚಾಮರಾಜ ನಗರ | 5 | 7.80 |
| 8 | ಚಿಕ್ಕಮಗಳೂರು | 8 | 10.40 |
| 9 | ಚಿತ್ರದುರ್ಗ | 6 | 7.80 |
| 10 | ಚಿಕ್ಕಬಳ್ಳಾಪುರ | 6 | 10.10 |
| 11 | ದಾವಣಗೆರೆ | 6 | 7.80 |
| 12 | ದಾರವಾಡ | 8 | 10.40 |
| 13 | ದಕ್ಷಿಣ ಕನ್ನಡ | 7 | 9.10 |
| 14 | ಗದಗ | 7 | 9.10 |
| 15 | ಹಾವೇರಿ | 8 | 10.40 |
| 16 | ಹಾಸನ | 8 | 10.40 |
| 17 | ಕಲ್ಬುರ್ಗಿ | 11 | 14.30 |
| 18 | ಕೊಪ್ಪಳ | 7 | 9.10 |
| 19 | ಕೊಡಗು | 3 | 3.90 |
| 20 | ಕೋಲಾರ | 6 | 7.80 |
| 21 | ಮಂಡ್ಯ | 7 | 9.10 |
| 22 | ಮೈಸೂರ | 8 | 11.70 |
| 23 | ರಾಮನಗರ | 4 | 5.20 |
| 24 | ರಾಯಚೂರು | 7 | 9.10 |
| 25 | ಶಿವಮೊಗ್ಗ | 7 | 9.10 |
| 26 | ತುಮಕೂರು | 10 | 13.00 |
| 27 | ಉತ್ತರ ಕನ್ನಡ | 12 | 15.60 |
| 28 | ವಿಜಯನಗರ | 6 | 5.70 |
| 29 | ವಿಜಯಪುರ | 12 | 16.90 |
| 30 | ಉಡುಪಿ | 7 | 9.10 |
| 31 | ಯಾದಗಿರಿ | 6 | 7.80 |
| | ಕೇಂದ್ರ ಕಚೇರಿ | | 70.00 |
| **ಒಟ್ಟು** | | **227** | **370.00** |

ಉಪ ಶೀರ್ಷಿಕೆವಾರು ಬಿಡುಗಡೆಯಾಗುವ ಅನುದಾನವನ್ನು ಮಾಸ್ಟರ್ ತರಬೇತುದಾರರಿಗೆ ಸಂಬಂಧಪಟ್ಟಂತೆ ವೆಚ್ಚವನ್ನು ತಾಲ್ಲೂಕು ಮಟ್ಟದಲ್ಲಿ ಮಾಡುವುದು ಹಾಗೂ ಜಿಲ್ಲಾ ತಾಂತ್ರಿಕ ಸಲಹೆಗಾರರಿಗೆ ಗೌರವಧನವನ್ನು ಜಲ್ಲಾ ಮಟ್ಟದಲ್ಲಿ ವೆಚ್ಚ ಭರಿಸುವುದು ಹಾಗೂ ಪ್ರಚಾರದ ಘಟಕಗಳಿಗಾಗಿ ಬಿಡುಗಡೆಯಾದ ಅನುದಾನವನ್ನು ನಿಯಮಾನುಸಾರ ವೆಚ್ಚ ಭರಿಸುವುದು.

**ಕೃಷಿ ನಿರ್ದೇಶಕರು**

## FLOW CHARTS

### I. SOPs for Aadhar Authentication Failure Cases.

Mainly two reasons for authentication failure

↓ ↓

1. Aadhar not seeded to bank account
↓
Need to enter name as per latest Aadhar in Tehsil login and same has to be Linked to the Bank account
↓
After updation in tehsil login it takes 3 days' time to fetch in CD login for further approval process.

2. Account inactive or frozen
↓
Bank Account to be activated

### 2. <u>ಮೇಲ್ವಿಚಾರಕರು ರೈತರ ಆಕ್ಷೇಪಣೆಗಳನ್ನು ಪರಿಶೀಲಿಸುವ ಕುರಿತು ಮಾಹಿತಿ</u>

Crop Survey website

↓

ವರ್ಷ ಹಾಗೂ ಹಂಗಾಮು ಆಯ್ಕೆ ಮಾಡಿಕೊಳ್ಳುವುದು

↓

ಮೇಲ್ವಿಚಾರಕರ Login Id ಹಾಗೂ password ನಮೂದಿಸುವುದು

↓

Select **Menus- Farmer objection raise details**

↓

ಹೋಬಳಿ ಹಾಗೂ ಗ್ರಾಮ ಆಯ್ಕೆ ಮಾಡುವುದು- Then click on **Get details**

↓

ಆಕ್ಷೇಪಣೆಯನ್ನು ಆಯ್ಕೆ ಮಾಡುವುದು (Scroll the screen to right end)

↓

**View actual survey details**- to view the photo uploaded by PR/ Farmer

↓

**Supervisor Action** ಅಲ್ಲಿ ಈ ಕೆಳಗಿನ ಆಯ್ಕೆಗಳನ್ನು ತೋರಿಸುವುದು. ಅವಶ್ಯಕತೆಗೆ ಅನುಗುಣವಾಗಿ ಒಂದನ್ನು ಆಯ್ಕೆ ಮಾಡುವುದು.

1. Mahzar Required
2. Crop name change option and the data in the crop survey is as per Farmer's request
3. Data captured in the crop survey is correct and hence reject the farmer's request

⇩

If Mahzar Required - Date – ಮಹಜರ್ ಮಾಡಿದ ದಿನಾಂಕವನ್ನು ದಾಖಲಿಸುವುದು.

- Mahzar details- ಶರಾ ದಾಖಲಿಸುವುದು
- Select Choose file- ಮಹಜರ್ PDF ಪ್ರತಿಯನ್ನು ಆಯ್ಕೆ ಮಾಡಿ upload ಮಾಡುವುದು.

(ತುಂಬಾ ಮೇಲ್ವಿಚಾರಕರು ಈ ಕಾರ್ಯ ಇಲ್ಲಿಗೆ ಮುಕ್ತಾಯವಾಯಿತು ಎಂದು ಭಾವಿಸುತ್ತಾರೆ. ಆದರೆ ಬೆಳೆ ಹೆಸರನ್ನು ಬದಲಾಯಿಸದ ಹೊರತು ತಂತ್ರಾಂಶದಲ್ಲಿ ಬೆಳೆ ಹೆಸರು ಬದಲಾಗುವುದಿಲ್ಲ)

⇩

- ನಂತರ ಬೆಳೆ ಹೆಸರು ಬದಲಾಯಿಸಬೇಕಾದಲ್ಲಿ ಎರಡನೇ ಆಯ್ಕೆಯನ್ನು ಆಯ್ಕೆ ಮಾಡಿಕೊಳ್ಳುವುದು.
- Scroll the screen to right end ಅಲ್ಲಿ EDIT ಆಯ್ಕೆ ಮಾಡಿಕೊಂಡು ಬೆಳೆ ಹೆಸರುಗಳು Select Option ಅಲ್ಲಿ ತೋರಿಸುತ್ತದೆ. ಅದರಲ್ಲಿ ಬೆಳೆ ಹೆಸರನ್ನು ಆಯ್ಕೆ ಮಾಡಿಕೊಂಡು ಬಲ ತುದಿಯಲ್ಲಿ Update ಆಯ್ಕೆಯನ್ನು ಒತ್ತಿ ನಂತರ ಕೆಳಗೆ ತೋರಿಸುವ save ಆಯ್ಕೆಯ button ಅನ್ನು ಒತ್ತುವುದು.
- ಖಾಸಗಿ ನಿವಾಸಿಗಳು /ರೈತರು, ಪಾಳು/ ಕೃಷಿಯೇತರ ಎಂದು ದಾಖಲಿಸಿದಲ್ಲಿ – ಆಕ್ಷೇಪಣೆಯನ್ನು ಆಯ್ಕೆ ಮಾಡಿದಾಗ ಕೆಳಗೆ ತೋರಿಸುವ ದಾಖಲಾದ ಮಾಹಿತಿಯಲ್ಲಿ screen scroll ಮಾಡಿ ಬಲತುದಿಯಲ್ಲಿ ತೋರಿಸುವ Delete ಆಯ್ಕೆಯನ್ನು ಒತ್ತಿದಲ್ಲಿ ಎಲ್ಲ ಮಾಹಿತಿಯನ್ನು ರದ್ದುಗೊಳಿಸಲಾಗುವುದು. ನಂತರ ಕೆಳಗೆ ತೋರಿಸುವ ADD ಆಯ್ಕೆಯನ್ನು ಒತ್ತಿದಾಗ ತೋರಿಸುವ ಎಲ್ಲ ಮಾಹಿತಿಯನ್ನು ಭರ್ತಿ ಮಾಡಿ ನಂತರ Save category ಆಯ್ಕೆಯನ್ನು ಒತ್ತಿ **SAVE** ಒತ್ತುವುದು.
- ಬದಲಾಯಿಸಿದ ಮಾಹಿತಿಯನ್ನು ಖಚಿತಪಡಿಸಿಕೊಳ್ಳಲು ಬೆಳೆ ದರ್ಶಕ್ ಆಪ್ ನಲ್ಲಿ ಪರಿಶೀಲಿಸುವುದು. ಬದಲಾಯಿಸಿದ ಮಾಹಿತಿಯು Crop name changed ಎಂದು ದಾಖಲಾಗಿ ಬದಲಾದ ಬೆಳೆ ಹೆಸರು ತೋರಿಸುತ್ತದೆ. ಆದರೆ ಈಗಾಗಲೇ ಸೆರೆಹಿಡಿದ ಛಾಯಾಚಿತ್ರದಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ.

  ಇದೇ ಮಾಹಿತಿಯು FRUIT website ನಲ್ಲಿ Update ಆಗಲು ಕನಿಷ್ಠ 3 ಗಂಟೆಗಳ ಸಮಯಾವಕಾಶ ಬೇಕಾಗುತ್ತದೆ.

### 3. ಖಾಸಗಿ ನಿವಾಸಿಗಳಿಗೆ ಗೌರವಧನ ಪಾವತಿಸುವ ವಿಧಾನ

Private Residents

⇩

Survey by Private Residents

⇩

Approval or Rejection of Surveyed Plots by Supervisor

⇩

Processing of PR Payments for Approved Plots by Crop Survey Support Team

⇓

Reflection of no. of approved plots eligible for payment in CD_login for further approval (it reflects only in cases where Aadhar & NPCI Seeding and Authentication is success)

⇓

Approval in Commissioner login and Pushed to DBT

⇓

Validation by DBT Team and Re-Pushed to Commissioner login

⇓

Validated cases are Pushed to K2 from Commissioner login

⇓

Preperation of K2 bills sent to Treasury for payment

⇓

Processing of K2 bills in Treasury and PR payment proposals sent to RBI and from RBI amount credited to respective PRs Account (only in cases where all the details entered / registered is correct else payment will be FAILED)

ಕೃಷಿ ನಿರ್ದೇಶಕರು